**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೧೦ ೬೪೬೦
ಫ್ಯಾಕ್ಸ್ : ೦೮೦–೨೨೨೧ ೧೭೩೦
www.karnatakasahithyaacademy.org

# ವಾರ್ತಾಪತ್ರ

ದ್ವೈಮಾಸಿಕ ಪತ್ರಿಕೆ

**ಸಂಚಿಕೆ : ೫೧–೫೨**
**ಜನವರಿ–ಏಪ್ರಿಲ್ – ೨೦೦೯**
**(ಸಂಯುಕ್ತ ಸಂಚಿಕೆ)**

*ಪ್ರಧಾನ ಸಂಪಾದಕರು*
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಸಂಪಾದಕರು*
**ಆರ್. ವಸಂತ್‌ಕುಮಾರ್**
**ಎಂ.ಡಿ. ತ್ರಿಲೋಚನ ಒಡೆಯರ್**

*ಪ್ರಕಾಶಕರು*
**ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

*ಮುಖಪುಟ ಚಿತ್ರ*
**ಚಂದ್ರನಾಥ ಆಚಾರ್ಯ**

*ಮುದ್ರಕರು*
**ಇಳಾ ಮುದ್ರಣ**
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫ ೭೧೫೯

## ಪರಿವಿಡಿ

- ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರ ಪರಿಚಯ ... ೩
- ಪತ್ರಿಕಾ ಮಾರ್ದನಿಗಳು ... ೧೮



ಅಕಾಡೆಮಿ ಅಧ್ಯಕ್ಷರ ಅಧಿಕಾರ ಸ್ವೀಕಾರ



ಹೊಸ ಶತಮಾನಕ್ಕೆ ಕನ್ನಡ ಪರಿಭಾಷೆಯ ಸಾಧ್ಯತೆಗಳು –
ಚಿಂತನಾ ಗೋಷ್ಠಿಯ ಉದ್ಘಾಟನಾ ಸಮಾರಂಭ



ಆನಂದಪುರದಲ್ಲಿ ನಡೆದ ನಾಟಕ ರಚನಾ ತರಬೇತಿ ಶಿಬಿರ

*(ವಿವರ : ಒಳಪುಟಗಳಲ್ಲಿ)*

ನಂ. ೧೮೨, ೬ನೇ ಕ್ರಾಸ್
೧ನೇ 'ಎನ್' ಬ್ಲಾಕ್, ರಾಜಾಜಿನಗರ
ಬೆಂಗಳೂರು – ೫೬೦ ೦೧೦
& ನಿವಾಸ : ೦೮೦–೨೩೫೬೯೯೧
ಅಕಾಡೆಮಿ : ೨೨೨೧೧೬೩೦



# ಪ್ರೊ. ಎಂ. ಎಚ್. ಕೃಷ್ಣಯ್ಯ

ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಮೂ**ಲತಃ ಮೈಸೂರಿನವರಾದ ಕೃಷ್ಣಯ್ಯನವರು ಕನ್ನಡ ಪ್ರಾಧ್ಯಾಪಕರಾಗಿ ಹಾಗೂ ಪ್ರಾಂಶುಪಾಲರಾಗಿ ಕರ್ನಾಟಕದ ಅನೇಕ ಸರ್ಕಾರಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯ ಬಗ್ಗೆ ಸಾಕಷ್ಟು ಅನುಭವವಿರುವ ಶ್ರೀಯುತರು ಸಾಹಿತ್ಯವಲ್ಲದೆ ಚಿತ್ರಕಲೆ, ಶಿಲ್ಪಕಲೆ ಹಾಗೂ ಸಂಗೀತದ ಬಗ್ಗೆ ಅಪಾರ ಜ್ಞಾನ ಸಂಪಾದಿಸಿದ್ದಾರೆ. ಸಾಹಿತ್ಯ ವಿಮರ್ಶೆಯಲ್ಲಿ ಹಾಗೂ ಕಲಾವಿಮರ್ಶೆಯಲ್ಲಿ ಸ್ಪಷ್ಟವಾದ ಖಚಿತವಾದ ಅಭಿಪ್ರಾಯಗಳನ್ನು ಸರಳವಾಗಿ ಓದುಗರಿಗೆ ತಿಳಿಯುವಂತೆ ಬರೆಯುತ್ತಾರೆ. ವಿಸ್ತಾರವಾದ ಓದು ಅನುಭವಗಳಿರುವ ಕೃಷ್ಣಯ್ಯನವರು ತುಂಬ ಸಂಕೋಚದ ಸ್ವಭಾವದವರು.

ಅನೇಕ ಗ್ರಂಥಗಳಿಗೆ ಹಾಗೂ ಪತ್ರಿಕೆಗಳಿಗೆ ಸಂಪಾದಕರಾಗಿ ಉತ್ತಮವಾದ ಕೃತಿಗಳು ಹಾಗೂ ಲೇಖನಗಳನ್ನು ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ಕೊಟ್ಟಿದ್ದಾರೆ. ಅವುಗಳಲ್ಲಿ ಮುಖ್ಯವಾದವು 'ಸಾಲುದೀಪ', 'ಬೆಂಗಳೂರು ದರ್ಶನ', 'ಕುವೆಂಪು ಸಾಹಿತ್ಯ ಚಿತ್ರ ಸಂಪುಟ'. ಇವುಗಳಲ್ಲಿ 'ಸಾಲುದೀಪ' ಮತ್ತು 'ಕುವೆಂಪು ಸಾಹಿತ್ಯ ಚಿತ್ರ ಸಂಪುಟ' ಕೃತಿಗಳು ಕೃಷ್ಣಯ್ಯನವರಿಗೆ ಸಾಕಷ್ಟು ಕೀರ್ತಿ ತಂದುಕೊಟ್ಟ ಕೃತಿಗಳಾಗಿವೆ. ಹಿರಿಯ ವಿಮರ್ಶಕರಾದ ಎಲ್. ಎಸ್. ಶೇಷಗಿರಿರಾವ್ ಅವರು ಹೇಳುವಂತೆ "ಕುವೆಂಪು ಸಾಹಿತ್ಯ ಚಿತ್ರ ಸಂಪುಟದಂತಹ ಕೃತಿ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಕಟವಾಗಿಲ್ಲ"ವೆಂದು ಕೃಷ್ಣಯ್ಯನವರ ಸಾಧನೆಯನ್ನು ಮೆಚ್ಚಿದ್ದಾರೆ.

ಇಲ್ಲಿಯವರೆಗೆ ಸುಮಾರು ಹದಿನಾರು ಸಂಪಾದಿತ ಕೃತಿಗಳನ್ನು ಹೊರತಂದಿರುವ ಇವರು ಸ್ವತಂತ್ರ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ 'ಕಾವ್ಯಭಾಷೆ' ಮತ್ತು 'ಆಲೋಕನ' ಕೃತಿಗಳಲ್ಲಿ ಕೆಲವು ಕನ್ನಡದ ಪ್ರಮುಖ ಕವಿಗಳ ಕಾವ್ಯಗಳನ್ನು ವಿಶ್ಲೇಷಿಸಿದ್ದಾರೆ. ಭಾಷಾಶಾಸ್ತ್ರದ ಬಗ್ಗೆ ವಿದ್ವತ್‌ಪೂರ್ಣ ಪಾಂಡಿತ್ಯವಿರುವ ಕೃಷ್ಣಯ್ಯನವರು 'ಸಂಕ್ಷಿಪ್ತ ಕನ್ನಡ ಭಾಷಾ ಚರಿತ್ರೆ' ಎಂಬ ಕೃತಿ ರಚಿಸಿ ಕನ್ನಡ ಭಾಷಾ ಚರಿತ್ರೆಗೆ ಅಮೂಲ್ಯ ಕೊಡುಗೆಯಾಗಿ ನೀಡಿದ್ದಾರೆ.

ಇವರ ಪ್ರಮುಖ ಆಸಕ್ತಿಯ ಕ್ಷೇತ್ರಗಳಾದ ಚಿತ್ರಕಲೆ ಮತ್ತು ಶಿಲ್ಪಕಲೆಗೆ ಸಂಬಂಧಿಸಿದಂತೆ ಶೃಂಗಾರ ಲಹರಿ, ಆರ್. ಎಂ. ಹಡಪದ್, ಎಚ್.ಎನ್. ಕುಲಕರ್ಣಿ, ಆರ್. ಎಸ್. ನಾಯ್ಡು, ಅಜಂತ ಎಲ್ಲೋರ, ರೂಪಶಿಲ್ಪಿ ಬಸವಯ್ಯ ಎಂಬ ಕೃತಿಗಳ ಜೊತೆಗೆ ಕನಕಪುರದ ಕರಿಯಪ್ಪನವರನ್ನು ಕುರಿತ 'ತ್ಯಾಗಯೋಗಿ' ಎಂಬ ಜೀವನಚರಿತ್ರೆ ಮತ್ತು ನಿಟ್ಟೂರು ಶ್ರೀನಿವಾಸರಾಯರಿಗೆ ಸಂಬಂಧಿಸಿದ 'ನಿಟ್ಟೂರು ನೂರರ ನೆನಪು' ಎಂಬ ಕೃತಿಗಳು ಕೂಡ ಬಹುಮುಖ್ಯವಾದವು.

ಇವರ ಸಾಹಿತ್ಯ ಸೇವೆಗೆ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ, ಅಲ್ಲದೆ ಕುವೆಂಪು ಪ್ರಶಸ್ತಿ, ಇವರ ಕೃತಿಗಳಾದ ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ 'ಶೃಂಗಾರ ಲಹರಿ' ಕಲಾವಿಮರ್ಶೆ ಕೃತಿಗೆ ಲಲಿತಕಲಾ ಅಕಾಡೆಮಿ ಪುರಸ್ಕಾರಗಳು ದೊರೆತಿವೆ. ಇದರೊಂದಿಗೆ ಯುವ ಕರ್ನಾಟಕ, ಸ್ಪೋರ್ಟ್ಸ್, ಅರೆನಾ, ಕರ್ನಾಟಕ ಕಲಾವಾರ್ತೆ ಹಾಗೂ ಕಲಾಪಂಥ ಮಾಲೆಗೆ ಸಂಪಾದಕರಾಗಿ, ಕನ್ನಡ ವಿಶ್ವವಿದ್ಯಾನಿಲಯ (ಹಂಪಿ), ಕನ್ನಡ ಪುಸ್ತಕ ಪ್ರಾಧಿಕಾರ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ (ತಂಜಾವೂರು)ಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರಸ್ತುತ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಪ್ರೊ. ಎಂ.ಎಚ್. ಕೃಷ್ಣಯ್ಯನವರು ನಿವೃತ್ತಿ ನಂತರವೂ ಕ್ರಿಯಾಶೀಲರಾಗಿ ಸಾಹಿತ್ಯ ಅಕಾಡೆಮಿಯ ಕಾರ್ಯಗಳಿಗೆ ಹೊಸ ಆಯಾಮ ನೀಡಿ, ಸಾಹಿತ್ಯಕ್ಕೆ ಅನುಕೂಲಕರವಾದ ವಾತಾವರಣ ಸೃಷ್ಟಿ ಹಾಗೂ ಕನ್ನಡ ಭಾಷೆಯ ಉಳಿವಿಗೆ ಆಧುನಿಕ ಸ್ಪರ್ಶವನ್ನು ನೀಡುವ ಕನಸುಗಳನ್ನು ಹೊಂದಿದವರಾಗಿದ್ದಾರೆ.

q



‘ಸಾಹಿತ್ಯಧಾರೆ’. ಸಿದ್ಧರಾಮ ಬಡಾವಣೆ
ಕಾಶಿಪುರ ರಸ್ತೆ, ಶಿವಮೊಗ್ಗ–೫೭೭೨೦೪
ಸಂಚಾರಿ ದೂರವಾಣಿ : ೯೮೪೪೫೭೩೫೭೩

## ಶ್ರೀ ಕತ್ತಿಗೆ ಚನ್ನಪ್ಪ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಮೂ**ಲತಃ ಶಿವಮೊಗ್ಗ ಜಿಲ್ಲೆಯವರಾದ ಶ್ರೀ ಕತ್ತಿಗೆ ಚನ್ನಪ್ಪನವರು ಸ್ನಾತಕೋತ್ತರ ಪದವೀಧರರು. ಇವರು ಕೇವಲ ಸಾಹಿತ್ಯಾಭಿರುಚಿಯನ್ನು ಮಾತ್ರ ಹೊಂದಿರದೆ ರಂಗಭೂಮಿ ಕ್ಷೇತ್ರದಲ್ಲಿಯೂ ಸಹ ಕಾರ್ಯ ನಿರ್ವಹಿಸಿದ್ದಾರೆ. ಅರವತ್ತರ ನಂತರವೂ ಸಕ್ರಿಯವಾಗಿ, ಉಪಯುಕ್ತವಾಗಿ, ಕ್ರಿಯಾಶೀಲರಾಗಿ ಬದುಕುತ್ತಿರುವ ಕತ್ತಿಗೆ ಚನ್ನಪ್ಪನವರು ಸಾಹಿತ್ಯ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕವಿಯಾಗಿ, ಕಥೆಗಾರರಾಗಿ, ಪ್ರಸಿದ್ಧರಾಗಿರುವ ಚನ್ನಪ್ಪನವರು ಕನ್ನಡ ನಾಡು ನುಡಿ ಸೇವೆಗೆ ಸದಾ ಸಿದ್ಧರಾಗಿ, ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

‘ಜೇನುಹುಟ್ಟು’ ಎಂಬ ಕವನ ಸಂಕಲನ, ‘ಮಾನಜ್ಜಿ ಮತ್ತು ಇತರ ಕತೆಗಳು’ (ಕಥಾ ಸಂಕಲನ) ‘ಹೊನ್ನರಳಿದ ಸಿದ್ದಶ್ರೀ ಸಂಗ್ರಹ’, ‘ನಂದಿಗೂಡಿ ಸಂಪದ ಸಂಗ್ರಹ’, ‘ಶಿವಮೊಗ್ಗ ಜಿಲ್ಲಾ ಕಥಾ ಸಂಕಲನ ಸಂಗ್ರಹ’, ‘ಪಂಡಿತ್ ಭರ್ಮೇಗೌಡರು ಕಂಡ ಮಹಾತ್ಮ ಗಾಂಧಿ’ ಎಂಬ ಹದಿನೈದಕ್ಕೂ ಹೆಚ್ಚು ಕೃತಿಗಳ ಜೊತೆಗೆ ‘ಮುತ್ತಿನ ತೆನೆ’ ಮತ್ತು ‘ಚಿತ್ತಾರ’ ಎಂಬ ಎರಡು ಮಕ್ಕಳ ಕವಿತೆಗಳ ಸಂಕಲನವನ್ನು ಹೊರತಂದು ಮಕ್ಕಳ ಸಾಹಿತ್ಯಕ್ಕೂ ಕೊಡುಗೆ ನೀಡಿದ್ದಾರೆ.

ಶಿವಮೊಗ್ಗ ಜಿಲ್ಲಾ ಹಾಗೂ ಶಿಕಾರಿಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕತ್ತಿಗೆ ಯುವಕ ಸಂಘ, ಬಸವಕೇಂದ್ರ, ಶರಣರ ಸಾಹಿತ್ಯ ಪರಿಷತ್ ಮುಂತಾದ ಕೇಂದ್ರಗಳಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಚನ್ನಪ್ಪನವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕನ್ನಡ ಸೈನಿಕ ಪ್ರಶಸ್ತಿ, ಹೃದಯವಂತ ಪ್ರಶಸ್ತಿ ಮುಂತಾದವುಗಳನ್ನು ಹಲವಾರು ಸಂಘ ಸಂಸ್ಥೆಗಳು ನೀಡಿ ಗೌರವಿಸಿವೆ.

‘ಪ್ರಣವ’, ಬಸವೇಶ್ವರ ಬಡಾವಣೆ
ಹೊಸಪೇಟೆ–೫೮೩೨೦೧, ಬಳ್ಳಾರಿ ಜಿಲ್ಲೆ
ಸಂಚಾರಿ ದೂರವಾಣಿ : ೯೪೪೮೨೨೮೩೬೮



# ಡಾ. ಮೃತ್ಯುಂಜಯ ರುಮಾಲೆ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಶ್ರೀ ಮೃತ್ಯುಂಜಯ ರುಮಾಲೆಯವರು ಕನ್ನಡ ಸ್ನಾತಕೋತ್ತರ ಪದವೀಧರರು. ಸಂಶೋಧನೆಯಲ್ಲಿ ವಿಶೇಷ ಆಸ್ಥೆ ಹೊಂದಿರುವ ಇವರು ‘ರಾಜಾಶ್ರಯದಲ್ಲಿ ಕನ್ನಡ ಸಾಹಿತ್ಯ’ ಎಂಬ ವಿಷಯ ಕುರಿತಂತೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಪ್ರಸ್ತುತ ಹೊಸಪೇಟೆಯ ವಿಜಯನಗರದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಲವಾರು ರಾಜ್ಯಮಟ್ಟದ ವಿಚಾರ ಸಂಕಿರಣಗಳಲ್ಲಿ ತಮ್ಮ ವಿದ್ವತ್‌ಪೂರ್ಣ ಪ್ರಬಂಧ ಮಂಡನೆ ಮಂಡಿಸಿರುವ ಶ್ರೀಯುತರ ಬಹುಪಾಲು ಸಂಶೋಧನಾ ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ವಚನ ನಿಘಂಟು, ಉರಿಲಿಂಗ ಪೆದ್ದಿ, ಬಸವ ಸಾಹಿತ್ಯ, ಜೇಡರ ದಾಸಿಮಯ್ಯ, ರಗಳೆಗಳ ನಾಮಕೋಶ, ಶ್ರೀ ಕೇದಾರಕ್ಷೇತ್ರ, ‘ಮಲ್ಲಿಕಾರ್ಜುನ ವಚನಾಂಕಿತ – ಒಂದು ಅಧ್ಯಯನ’ ಇನ್ನೂ ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಸಂಪಾದನಾ ಕ್ಷೇತ್ರದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ಇವರ ಬಹುಮುಖ್ಯ ಸಂಪಾದಿತ ಕೃತಿಗಳೆಂದರೆ ‘ಕೇಡಿಲ್ಲದ ಪದವಿ’, ‘ಅಮೃತ ಶರಧಿ’ ‘ಹಾವಿನ ಹಾಳು ಕಲ್ಲಪ್ಪಯ್ಯಗಳ ಪವಾಡ ಸಾಂಗತ್ಯ’, ‘ಹರಿದ ಹೆದ್ದೊರೆ’ ಇತ್ಯಾದಿಗಳು. ಗದಗ ಜಿಲ್ಲೆಯ ಶ್ರೀ ಜಗದ್ಗುರು ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿರುವ ಶ್ರೀಯುತರು ಬೆಂಗಳೂರಿನಲ್ಲಿರುವ ಬಸವ ಸಮಿತಿಯವರು ಪ್ರಕಟಿಸುವ ಮಾಸಿಕ ‘ಬಸವಪಥ’ ಪತ್ರಿಕೆಯ ಸಂಪಾದಕ ಸಮಿತಿಯ ವಿಶೇಷ ಸದಸ್ಯರಾಗಿದ್ದಾರೆ. ಹೊಸಪೇಟೆ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಈ ಹಿಂದೆ ಗಣನೀಯ ಸೇವೆ ಸಲ್ಲಿಸಿದ್ದಾರೆ. ಇವರ ‘ವಚನ ನಿಘಂಟು’ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ಹಾಗೂ ಹಳಕಟ್ಟಿ ಶ್ರೀ ಪುರಸ್ಕಾರ ಲಭಿಸಿವೆ. ೨೦೦೭ರಲ್ಲಿ ಇವರು ಡಾ॥ ಎಚ್. ತಿಪ್ಪೇರುದ್ರಸ್ವಾಮಿ ಸಾಹಿತ್ಯ ಪುರಸ್ಕಾರ ಗೌರವಕ್ಕೆ ಪಾತ್ರರಾಗಿದ್ದಾರೆ.

೧



ನಂ. ೧೬, 'ಶ್ರೀಗೌರಿ', ಕನಕನಗರ
ಬಸವೇಶ್ವರ ದೇವಸ್ಥಾನದ ಹತ್ತಿರ
ಎಂ.ವಿ. ಬಡಾವಣೆ, ಹೊಸಕೋಟೆ
ಬೆಂಗಳೂರು ಜಿಲ್ಲೆ – ೫೬೨೧೧೪
ಸಂಚಾರಿ ದೂರವಾಣಿ : ೯೮೮೬೧೫೨೭೨೬

# ಡಾ. ಚಂದ್ರಶೇಖರ ನಂಗಲಿ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಕೋ**ಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕಿನ ನಂಗಲಿಯಲ್ಲಿ ೨೪–೦೯–೧೯೫೬ರಂದು ಜನಿಸಿದ ಶ್ರೀ ಚಂದ್ರಶೇಖರ ನಂಗಲಿಯವರು ಪ್ರಸಕ್ತ ಕೋಲಾರದ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಹಿಂದೆ ಕೋಲಾರದ ಕನ್ನಡ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವ ನಂಗಲಿಯವರು ವಿದ್ಯಾರ್ಥಿಗಳ ಅಪಾರ ಪ್ರೀತಿಗೆ ಪಾತ್ರರಾಗಿದ್ದಾರೆ. ಇದಲ್ಲದೆ ಕಾಲೇಜು ಶಿಕ್ಷಣ ನಿರ್ದೇಶನಾಲಯದಲ್ಲಿ ಸಹಾಯಕ ನಿರ್ದೇಶಕರಾಗಿ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸಿದ ಅನುಭವವಿದೆ. ಕೋಲಾರದಲ್ಲಿ 'ಅಗನಾಗ್' ಎಂಬ ಗೆಳೆಯರ ಬಳಗ ಕಟ್ಟಿಕೊಂಡು ಕ್ರಿಯಾಶೀಲ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಡಾ. ಎಲ್. ಬಸವರಾಜು ಟ್ರಸ್ಟ್‌ನ ಸ್ಥಾಪಕ ಸದಸ್ಯರಾಗಿ, ನವಕರ್ನಾಟಕ ಪ್ರಕಾಶನದ ಹೆಮ್ಮೆಯ ಮಾಸಿಕ 'ಹೊಸತು' ಪತ್ರಿಕೆಯ ಸಮಾಲೋಚಕ ಮಂಡಳಿಯ ಸದಸ್ಯರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ 'ಶ್ರೇಷ್ಠ ಕೃತಿ' ಪ್ರಶಸ್ತಿಯ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಅಪ್ಪಟ ಪರಿಸರಪ್ರೇಮಿಯಾದ ನಂಗಲಿ ಪರ್ವತಾರೋಹಣ ಮತ್ತು ಹಳ್ಳಿಗಾಡುಗಳಲ್ಲಿ ಕಾಲ್ನಡಿಗೆಯ ತಿರುಗಾಟದಲ್ಲಿ ಸದಾಕಾಲ ಮುಂದು. ಕಾಲ್ನಡಿಗೆಯನ್ನೇ ತನ್ನ ನಿತ್ಯ ಅಭ್ಯಾಸವಾಗಿರಿಸಿಕೊಂಡಿರುವ ನಂಗಲಿ 'ಕನ್ನಡದಲ್ಲಿ ಚಾರಣ ಸಾಹಿತ್ಯ–ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಬೆಂಗಳೂರು ವಿಶ್ವವಿದ್ಯಾಲಯದಿಂದ ೨೦೦೫ರಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ 'ಹಸಿರು ಕಾಳಜಿ' ಮತ್ತು 'ಜೀವಕೇಂದ್ರಿತ' ದೃಷ್ಟಿಕೋನಗಳಿಂದ ಪ್ರಸಿದ್ಧರಾಗಿರುವ ನಂಗಲಿಯವರು 'ನಿರ್‌ಬೀಜೀಕರಣದ ವಿರಾಟ ಸ್ವರೂಪ' (೧೯೯೯), 'ಕಾಡು ಮತ್ತು ತೋಪು' (೨೦೦೦), 'ಹಸಿರು ಪಿರಮಿಡ್' (೨೦೦೭) ಎಂಬ ಕೃತಿಗಳನ್ನು ನೀಡಿದ್ದಾರೆ. ಸಾಹಿತ್ಯ ಚಿಂತನೆಗೆ ಪರಿಸರದ ಆಯಾಮವೊಂದನ್ನು ಗಟ್ಟಿಯಾಗಿ ರೂಪಿಸುತ್ತಿರುವ ನಂಗಲಿಯವರು ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಆಳವಾದ ಅಧ್ಯಯನ ನಡೆಸಿ ಮೌಲ್ಯಯುತ ಬರಹಕ್ಕೆ, ಗಂಭೀರ ಮಾತಿಗೆ ಹೆಸರಾಗಿದ್ದಾರೆ. ಇವರ ಇನ್ನಿತರ ಪ್ರಮುಖ ಕೃತಿಗಳೆಂದರೆ 'ಮಾರ್ಕ್ಸ್‌ವಾದಿ ವಿಮರ್ಶೆ', (೧೯೯೫), 'ನಾ ನಿಲ್ಲುವಳಲ್ಲ' (೧೯೯೭), 'ನಾ ನಿಮ್ಮೊಳಗು' (೨೦೦೨), 'ತಿಟ್ಟತ್ತಿ ತಿರುಗಿ' (೨೦೦೩), 'ನಡೆದುದೆ ದಾರಿ' (೨೦೦೪) ಇನ್ನೂ ಮುಂತಾದವು.

ರಸಋಷಿ ಕುವೆಂಪುರವರ ಸಮಗ್ರ ಸಾಹಿತ್ಯ ಕುರಿತ 'ಆಲಿಸಯ್ಯ ಮಲೆಯ ಕವಿ' (೨೦೦೫) ಎಂಬ ನಂಗಲಿಯವರ ವಿಮರ್ಶಾಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಲಭಿಸಿದೆ.

q



'ಶ್ರೀಹರಿ ನಿಲಯ', ನಂ. ೧೦
೧ನೇ 'ಎ' ಮೈನ್, ೨ನೇ ಕ್ರಾಸ್
೩ನೇ ಫೇಸ್, ೩ನೇ ಹಂತ
ಕತ್ರಿಗುಪ್ಪೆ ಹತ್ತಿರ, ಬೆಂಗಳೂರು – ೫೬೦೦೮೫
ಸಂಚಾರಿ ದೂರವಾಣಿ : ೯೩೪೧೩೪೧೧೨೪

# ಶ್ರೀ ಬಾಲಗುರುಮೂರ್ತಿ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಶ್ರೀ ಬಾಲಗುರುಮೂರ್ತಿ ವೃತ್ತಿಯಿಂದ ಇಂಗ್ಲಿಷ್ ಅಧ್ಯಾಪಕರು. ಇಂಗ್ಲಿಷ್ ಸಾಹಿತ್ಯ ಮತ್ತು ಕನ್ನಡ ಸಾಹಿತ್ಯದಲ್ಲಿಯೂ ಆಸಕ್ತರಾಗಿರುವ ಇವರು ಎರಡು ವಿಷಯಗಳಲ್ಲೂ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಟ್ಟಕಡೆಯ ಹಳ್ಳಿ ಮೇಡಹಳ್ಳಿ ಇವರ ಹುಟ್ಟೂರು.

ಅಪ್ಪಟ ಅಲೆಮಾರಿ ಪ್ರತಿಭೆಯಾದ ಬಾಲಗುರುಮೂರ್ತಿಯವರು ಅಲೆಮಾರಿ ಸಮುದಾಯದ ಮೊದಲ ಪದವೀಧರ. ಇವರು ತನ್ನ ಸಮುದಾಯದ ಧ್ವನಿಯಷ್ಟೇ ಆಗಿರದೇ ಇಡೀ ರಾಜ್ಯದ ಎಲ್ಲಾ ಅಲೆಮಾರಿ ಬುಡಕಟ್ಟುಗಳ ಸಂಘಟನೆಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯದ ಅಲೆಮಾರಿ ಬುಡಕಟ್ಟುಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದು, ರಾಷ್ಟ್ರಮಟ್ಟದ ಸಂಘಟನೆಗಳ ಒಕ್ಕೂಟಕ್ಕೆ ಕರ್ನಾಟಕದ ಪ್ರತಿನಿಧಿ. ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಅನೇಕ ಸಂಘಟನೆಗಳ ಹಾಗೂ ಹೋರಾಟಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿರುವ ಇವರು ಪ್ರಸ್ತುತ ಸರ್ಕಾರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರು.

ಈ ನಡುವೆ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಕೆಲವು ವರ್ಷಗಳು ಪ್ರಾದೇಶಿಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಕವಿ, ಕಥೆಗಾರ, ಸಂಘಟಕ, ಪ್ರಗತಿಪರ ಚಿಂತಕರಾದ ಇವರು ಪ್ರಜಾವಾಣಿಯಲ್ಲಿ ಅನೇಕ ತಿಂಗಳು 'ವಿಳಾಸವಿಲ್ಲದವರು' ಅಂಕಣದ ಮೂಲಕ ನಾಡಿನ ಜನತೆಗೆ ಪರಿಚಿತರು.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಯಾಗಿರುವ ಬಾಲಗುರುಮೂರ್ತಿಯವರ ಕಥೆ ಮತ್ತು ಕವನಗಳು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಪುಸ್ತಕ ರೂಪದಲ್ಲಿ ಹೊರಬರಬೇಕಾಗಿದೆ.

ಅಲೆಮಾರಿ ಸಮುದಾಯಗಳನ್ನು ಕುರಿತು ಇವರು ಬರೆದ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದೆ. 'The Profile of Nomads in Karnataka' ಎನ್ನುವ ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಬರೆದಿದ್ದಾರೆ.

q



'ಬೆಳಗು', ಆನಂದಾಶ್ರಮ ರಸ್ತೆ
ಮಸಾರಿ, ಗದಗ – ೫೮೨೧೦೧
ಸಂಚಾರಿ ದೂರವಾಣಿ : ೯೪೪೮೬೭೭೪೫೪

# ಶ್ರೀ ಚಂದ್ರಶೇಖರ ವಸ್ತ್ರದ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಗದಗ ಜಿಲ್ಲೆಯ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಚಂದ್ರಶೇಖರ ವಸ್ತ್ರದ ಅವರು ಕವಿಯಾಗಿ, ಕಥೆಗಾರರಾಗಿ, ಪ್ರಬಂಧಕಾರರಾಗಿ ಕನ್ನಡ ಸಾಹಿತ್ಯ ವಲಯದಲ್ಲಿ ಚಿರಪರಿಚಿತರಾಗಿದ್ದಾರೆ.

ಉತ್ತಮ ವಾಗ್ಮಿಗಳಾದ ವಸ್ತ್ರದ ಅವರು ನಾಡಿನಾದ್ಯಂತ ನಡೆದ ಅನೇಕ ವಿಚಾರ ಸಂಕಿರಣಗಳಲ್ಲಿ ತಮ್ಮ ಪಾಂಡಿತ್ಯಪೂರ್ಣ ಲೇಖನಗಳನ್ನು ಮಂಡಿಸಿದ್ದಾರೆ. ಅನೇಕ ಕವಿಗೋಷ್ಠಿಗಳಲ್ಲಿ ತಮ್ಮ ಶ್ರೇಷ್ಠ ಕವನಗಳನ್ನು ವಾಚಿಸಿ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಗದುಗಿನ ತೋಂಟದಾರ್ಯ ಮಠದ 'ಲಿಂಗಾಯಿತ ಅಧ್ಯಯನ ಸಂಸ್ಥೆ'ಯ ನಿರ್ದೇಶಕರಾಗಿ ನೂರಾರು ಶಿವಶರಣರ ಕೃತಿಗಳನ್ನು ಹೊರತಂದಿರುವ ಶ್ರೀಯುತರು ಶರಣ ಸಾಹಿತ್ಯ ಪರಂಪರೆಯನ್ನು ಪರಿಚಯಿಸಲು ಉತ್ತಮ ಕಾರ್ಯಗಳನ್ನು ಕೈಗೊಂಡಿದ್ದಾರೆ, ಇವರ ಅನೇಕ ಲೇಖನಗಳು, ಕವಿತೆ ಹಾಗೂ ಪ್ರಬಂಧಗಳು ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಸಂಘಟನಾ ಚಾತುರ್ಯವಿರುವ ಚಂದ್ರಶೇಖರ ವಸ್ತ್ರದ ಅವರು ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಸಾಹಿತ್ಯಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿದ್ದಾರೆ. ಹಲವಾರು ಸಂಘಸಂಸ್ಥೆಗಳಲ್ಲಿ ಸದಸ್ಯರಾಗಿ, ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಇವರನ್ನು ಕರ್ನಾಟಕ ಸರ್ಕಾರ ಗುರುತಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಸದಸ್ಯರಾಗಿ ಎರಡು ಅವಧಿಗೆ ಆಯ್ಕೆ ಮಾಡಿತ್ತು. ಸಂಪಾದನಾ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಶ್ರೀಯುತರ ನೇತೃತ್ವದಲ್ಲಿ ಇಪ್ಪತ್ತೈದಕ್ಕೂ ಅಧಿಕ ಕೃತಿಗಳು ಪ್ರಕಟಗೊಂಡಿವೆ.

ಲಕ್ಕುಂಡಿ ಉತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸಿ "ಲೊಕ್ಕಿಗುಂಡಿ" ಎಂಬ ಸ್ಮರಣ ಸಂಚಿಕೆ ಹೊರ ತಂದಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ, ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಮಲ್ಲಿಕಾರ್ಜುನ ಮನ್ಸೂರರ ಸಂಗೀತ ಸ್ಮೃತಿ, ನಾಟಕೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿ ಜನಾನುರಾಗಿಯಾಗಿದ್ದಾರೆ.

ಬ್ಯಾರಿಸ್ಟರ್ ಎಂ. ಎಸ್. ಸರದಾರರು (ಜೀವನ ಚರಿತ್ರೆ) 'ಹರಿದಾವ ನೆನಪು' (ಲಲಿತ ಪ್ರಬಂಧ), 'ಅಭಿನವ ದುಶ್ಶಾಸನ' (ಬೀದಿ ನಾಟಕ), ಮನದ ಮಾತುಗಳು (ಚಿಂತನ), ನೀಲಾಂಬಿಕೆ (ವಿಮರ್ಶೆ), ನಾದಲೀಲೆಯ ನಲ್ವಾಡು (ವಿಮರ್ಶೆ) ಎಂಬ ಸ್ವತಂತ್ರ ಕೃತಿಗಳ ಜೊತೆಗೆ ಹರಿಹರನ ಕಥಾಕುಸುಮಗಳು, 'ಶಿವಶರಣರ ಕಥೆಗಳು', 'ಅವ್ವ' ಕವನ ಸಂಕಲನ – ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ.

q

‘ರತ್ನತ್ರಯ’, ೧೫ನೇ ಕ್ರಾಸ್
ವಿದ್ಯಾಗಿರಿ, ಬಾಗಲಕೋಟ
ಸಂಚಾರಿ ದೂರವಾಣಿ : ೯೩೪೩೪೪೬೬೩೧೩



# ಡಾ. ಬಾಳಾ ಸಾಹೇಬ ಲೋಕಾಪುರ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಕ**ಥೆ, ಕಾದಂಬರಿ, ವಿಮರ್ಶೆ, ಕಾವ್ಯ-ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಡಾ. ಬಾಳಾ ಸಾಹೇಬ ಲೋಕಾಪುರ ಅವರದು ಸಾಹಿತ್ಯ ಲೋಕದಲ್ಲಿ ಸದಾಕಾಲ ಪ್ರಚಲಿತದಲ್ಲಿರುವ ಹೆಸರು. ಮೂಲತಃ ಬೆಳಗಾವಿ ಜಿಲ್ಲೆಯ ಶಿರಹಟ್ಟಿ ಗ್ರಾಮದವರಾದ ಇವರು ಭೂಗೋಳಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ಬಾಗಲಕೋಟೆಯ ಎಸ್. ಸಕ್ರಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಲೋಕಾಪುರರವರು ಡಾ. ರಹಮತ ತರೀಕೆರೆಯವರ ಮಾರ್ಗದರ್ಶನದಲ್ಲಿ ‘ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ಜೈನ ಸಂವೇದನೆ’ ವಿಷಯ ಕುರಿತಾಗಿ ಆಳವಾದ ಅಧ್ಯಯನ ನಡೆಸಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಸೃಜನಶೀಲ ಬರಹಗಾರರಾದ ಇವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯವಾದ ೨೯ ಕೃತಿಗಳ ಕೊಡುಗೆ ನೀಡಿದ್ದಾರೆ. ಇವರ ಪ್ರಕಟಿತ ಕಥಾ ಸಂಕಲನಗಳು ಕವಣೆಗಲ್ಲು (೧೯೯೪), ಹಾರುವ ಹಕ್ಕಿ ಮತ್ತು ಆಕಾಶ (೧೯೯೭), ತನುಕರಗದವರಲ್ಲಿ (೧೯೯೯), ಕಂಗಳು ತುಂಬಿದ ಬಳಿಕ (೨೦೦೩), ಕೃಷ್ಣೆ ಒಡಲ ತುಂಬ (೨೦೦೮), ಕಾದಂಬರಿಗಳು ಬಿಸಿಲುಪುರ (೧೯೯೬), ಹುತ್ತ (೨೦೦೨), ಉಧೋ ಉಧೋ (೨೦೦೮), ಜೊತೆಗೆ ಪ್ರತಿಫಲನ (೨೦೦೦), ಸಮುಚಿತ (೨೦೦೬), ರಸಾಧಿಕ (೨೦೦೮) ಎಂಬ ವಿಮರ್ಶಾ ಕೃತಿಗಳು, ಎಂಟು ಸಂಪಾದಿತ ಕೃತಿಗಳು ಪ್ರಕಟಗೊಂಡಿವೆ. ಇವರಿಗೆ ಹೆಚ್ಚು ಮನ್ನಣೆಯನ್ನು ತಂದುಕೊಟ್ಟ ಕಾದಂಬರಿಗಳೆಂದರೆ ‘ಹುತ್ತ’ ಮತ್ತು ‘ಬಿಸಿಲುಪುರ’.

ಬಾಗಲಕೋಟೆ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಆ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ ತಮ್ಮ ಸಂಘಟನಾ ಕೌಶಲ ಮೆರೆದಿದ್ದಾರೆ. ಇವರ ಸಾಹಿತ್ಯಿಕ ಕೊಡುಗೆಗಳನ್ನು ಪರಿಗಣಿಸಿ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಇವರ ಮೊದಲ ಕಾದಂಬರಿ ‘ಬಿಸಿಲುಪುರ’ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಎರಡನೆಯ ಕಾದಂಬರಿ ‘ಹುತ್ತ’ ಕೃತಿಗೆ ಚದುರಂಗ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿರುವುದು ಅವರ ಸೃಜನಶೀಲತೆಗೆ ಸಿಕ್ಕ ಗೌರವವಾಗಿದೆ. ಇವರ ಸಮಗ್ರ ಸಾಹಿತ್ಯವನ್ನು ಗಮನದಲ್ಲಿರಿಸಿ ೨೦೦೮ರಲ್ಲಿ ಶ್ರೀ ಗೊಮ್ಮಟೇಶ್ವರ ವಿದ್ಯಾಪೀಠ ಸಾಹಿತ್ಯ ಪ್ರಶಸ್ತಿಯನ್ನೂ ನೀಡಲಾಗಿದೆ.



'ತೇಜಸ್ವಿನಿ', ಸರಸ್ವತಿಪುರ
ವಿಶ್ವವಿದ್ಯಾಲಯ ಅಂಚೆ
ಗುಲಬರ್ಗಾ – ೫೮೫೧೦೬
ಸಂಚಾರಿ ದೂರವಾಣಿ : ೯೯೦೧೬೩೨೧೭೯

## ಡಾ. ಜಯಶ್ರೀ ದಂಡೆ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಕ**ನ್ನಡ ಮಹಿಳಾ ಸಾಹಿತ್ಯದಲ್ಲಿ ವಿಶೇಷವಾಗಿ ಕಂಡುಬರುವ ಹೆಸರು ಜಯಶ್ರೀ ದಂಡೆಯವರದು. ತಮ್ಮ ಉತ್ತಮ ಕಾವ್ಯ ಹಾಗೂ ಕಥೆಗಳಿಂದ ನಾಡಿನಲ್ಲಿ ಪ್ರಸಿದ್ಧರಾಗಿರುವ ಜಯಶ್ರೀ ದಂಡೆಯವರು ನಾಡಿನ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವಾಚಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವಚನಸಾಹಿತ್ಯದ ಬಗ್ಗೆ ವಿಶೇಷ ಒಲವುಳ್ಳ ಜಯಶ್ರೀ ದಂಡೆಯವರು ಬೆಡಗಿನ ವಚನಗಳ ಬಗ್ಗೆ ಸಂಶೋಧನೆ ನಡೆಸಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಕರ್ನಾಟಕ ರಾಜ್ಯ ಹೈಕೋರ್ಟ್ ಆದೇಶದ ಮೇರೆಗೆ ಜಿಲ್ಲಾ ಗುಲ್ಬರ್ಗಾ ಜಿಲ್ಲಾ ಕುಟುಂಬ ನ್ಯಾಯಾಲಯದಲ್ಲಿ ಸಮಾಲೋಚಕಿಯಾಗಿ ಅನೇಕ ನೊಂದ ಜೀವಗಳಿಗೆ ಸಾಂತ್ವನ ಹೇಳಿದ್ದಾರೆ.

ಜೊತೆಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿ ನೇಮಕಗೊಂಡು ಉತ್ತಮ ಸಂಶೋಧನ ಕೃತಿಗಳು ರಚನೆಯಾಗುವಂತೆ ಶ್ರಮಿಸಿದ್ದಾರೆ. ಸುಮಾರು ೯೫ ಕೃತಿಗಳನ್ನು ರಚಿಸಿರುವ ಜಯಶ್ರೀ ದಂಡೆಯವರು ಅಜ್ಞಾತ ವಚನಕಾರರ ಬಗ್ಗೆ ಬೆಳಕು ಚೆಲ್ಲುವ ಉತ್ತಮ ಕೃತಿಗಳನ್ನು ನೀಡಿದ್ದಾರೆ. 'ವಚನಕಾರ್ತಿ ರಾಯಮ್ಮ', 'ಹಡಪದ ಲಿಂಗಮ್ಮ', 'ಗಜೇಶ ಮಸಣಯ್ಯ', ಗುಪ್ತ ಮಂಚಣ್ಣ', 'ಬೊಕ್ಕಸದ ಚಿಕ್ಕಣ್ಣ' ಹೀಗೆ ಹಲವು ವಚನಕಾರರನ್ನು ಪರಿಚಯಿಸಿದ ಕೀರ್ತಿ ಜಯಶ್ರೀಯವರಿಗೆ ಸಲ್ಲುತ್ತದೆ. ಇವರಿಗೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ಕೃತಿಗಳೆಂದರೆ 'ಫಲದೊಳಗಣ ರುಚಿ', 'ಬೆಡಗಿನ ವಚನಗಳ ಪರಿಭಾಷಾಕೋಶ', 'ಶಿಶುನಾಳ ಶರೀಫ', 'ವಚನಗಳಲ್ಲಿ ಶೈವ ಮತ್ತು ವೀರಶೈವ'. ಅನೇಕ ದಿನಪತ್ರಿಕೆಗಳಲ್ಲಿ ಅಂಕಣಕಾರರಾಗಿರುವ ಜಯಶ್ರೀಯವರು ಆಕಾಶವಾಣಿಯಲ್ಲಿ ಬಹು ವಿಧದ ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. 'ಕವಿಮಾರ್ಗ', 'ಬಸವಪಥ' ಪತ್ರಿಕೆಗಳಲ್ಲಿ ಸಂಪಾದಕರಾಗಿ, ಸಲಹಾ ಮಂಡಳಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಅನೇಕ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ವಿಚಾರ ಗೋಷ್ಠಿಗಳಲ್ಲಿ ತಮ್ಮ ಲೇಖನಗಳನ್ನು ಮಂಡಿಸಿ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇವರ ಸಾಹಿತ್ಯ ಸೇವೆ ಹಾಗೂ ಪ್ರತಿಭೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಇವರನ್ನು ಗೌರವಿಸಿವೆ. 'ಜೋಳದ ರಾಶಿ ದೊಡ್ಡನಗೌಡ ಪ್ರಶಸ್ತಿ', 'ಗೊರೂರು ಪ್ರಶಸ್ತಿ', 'ಅತ್ತಿಮಬ್ಬೆ ಪ್ರಶಸ್ತಿ', ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ 'ಸಾವಿತ್ರಮ್ಮ ದತ್ತಿ ಪ್ರಶಸ್ತಿ', 'ವಚನ ಸಾಹಿತ್ಯಶ್ರೀ' ಪ್ರಶಸ್ತಿಗಳ ಜೊತೆಗೆ ೨೦೦೭ರಲ್ಲಿ ನಡೆದ ಅಳಂದ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಪಾತ್ರರಾಗಿದ್ದಾರೆ.



‘Shivashankara’, Kokkalaginagar
Bygehalli Road, Akkalkote - 413216
Dist: Solapur, Maharashtra State
Mobile : 09421028147

# ಡಾ. ಧಬಾಲೆ ಗುರುಲಿಂಗಪ್ಪ ಶಂಕರೆಪ್ಪ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಮುಖ ಲೇಖಕರು ಹಾಗೂ ಸಂಘಟಕರೂ ಆದ ಶ್ರೀಯುತ ಧಬಾಲೆ ಗುರುಲಿಂಗಪ್ಪ ಶಂಕರೆಪ್ಪ ಸಿ.ಬಿ. ಖೇಡಗಿ ಬಸವೇಶ್ವರ ವಿಜ್ಞಾನ ಮತ್ತು ಆರ್.ಜೆ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಶೋಧನೆ ಹಾಗೂ ಸಂಘಟನೆಯಲ್ಲಿ ವಿಶೇಷ ಆಸಕ್ತಿವುಳ್ಳ ಶ್ರೀಯುತರು ‘ಬೀದರ ಜಿಲ್ಲೆಯ ಅನುಭಾವಿ ಕವಿಗಳು’ ಎಂಬ ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಕೆಳವರ್ಗದ ವಚನಕಾರನಾದ ಅಂಬಿಗರ ಚೌಡಯ್ಯ ಮತ್ತು ತತ್ವಪದಕಾರರನ್ನು ಕುರಿತು ಸಂಶೋಧಿಸಿ ‘ಅಂಬಿಗ ಚೌಡಯ್ಯನ ವಚನಗಳು – ಒಂದು ಅಧ್ಯಯನ’ ಮತ್ತು ‘ಬೀದರ ಜಿಲ್ಲೆಯ ತತ್ವಪದಕಾರರು’ ಎಂಬ ಸಂಶೋಧನ ಗ್ರಂಥಗಳನ್ನು ರಚಿಸಿದ್ದಾರೆ. ಇವರ ಇತರ ಪ್ರಕಟಿತ ಕೃತಿಗಳೆಂದರೆ ಗಡಿ ಬೆಡಗು (ಲೇಖನ ಸಂಗ್ರಹ), ಹುಲಸೂರ ಬಸವಕುಮಾರ ಶಿವಯೋಗಿ (ಜೀವನ ಚರಿತ್ರೆ), ಬಸವಯೋಗಿ (ಸಂಪಾದನೆ), ಚನ್ನಬಸವ ಕಲ್ಯಾಣ (ಸಂಪಾದನೆ).

ವಚನಕಾರರು ಮತ್ತು ತತ್ವಪದಕಾರರ ಬಗ್ಗೆ ವಿಶೇಷ ಜ್ಞಾನವುಳ್ಳ ಶಂಕರೆಪ್ಪನವರು ನಾಡಿನಾದ್ಯಂತ ಅನೇಕ ವಿಚಾರ ಗೋಷ್ಠಿಗಳಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿ ಜನಮೆಚ್ಚುಗೆ ಪಡೆದಿದ್ದಾರೆ. ಇವರ ಅನೇಕ ಲೇಖನಗಳು ಕನ್ನಡದ ಹೆಸರಾಂತ ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಅನೇಕ ಸಂಘ ಸಂಸ್ಥೆಗಳಲ್ಲಿ ಕಾರ್ಯದರ್ಶಿಯಾಗಿ, ಗಡಿ ಕನ್ನಡನುಡಿ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಶ್ರೀಯುತ ಧಬಾಲೆ ಗುರುಲಿಂಗಪ್ಪ ಶಂಕರೆಪ್ಪನವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಡಿನಾಡು ಹೊರನಾಡು ಸ್ಥಿತಿಗತಿ ಉಪಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಸೊಲ್ಲಾಪುರ ವಿಶ್ವವಿದ್ಯಾಲದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿದ್ದಾರೆ. ಹೀಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಶ್ರೀಯುತರನ್ನು ಹಲವಾರು ಸಂಘಸಂಸ್ಥೆಗಳು ಗುರುತಿಸಿ, ಗೌರವಿಸಿ ಸನ್ಮಾನಿಸಿವೆ.

q

---

***ಶ್ರೀ ಶ್ರೀನಿವಾಸ ವೈದ್ಯ*** *ಅವರ ಮೊಟ್ಟಮೊದಲ*
*ಕಾದಂಬರಿ* ***ಹಳ್ಳ ಬಂತು ಹಳ್ಳ*** *ಕೃತಿಗೆ ೨೦೦೮ನೇ*
*ಸಾಲಿನ*
*ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.*

*ಇವರಿಗೆ*
***ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಭಿನಂದನೆಗಳು.***

*ಕೇಂದ್ರ ಸಾಹಿತ್ಯ ಅಕಾಡೆಮಿಯ*
***ಭಾಷಾ ಸಮ್ಮಾನ್ – ೨೦೦೭*** *ರ ಗೌರವಕ್ಕೆ*
*ಪಾತ್ರರಾಗಿರುವ* ***ಡಾ. ಎಸ್. ಶೆಟ್ಟರ್*** *ಅವರಿಗೆ*

***ಕರ್ನಾಟಕ ಸಾಹಿತ್ಯ ಅಕಾಡೆಮಿಯ***
*ಅಭಿನಂದನೆಗಳು*



ನಂ. ೧೫, ಮಲ್ಲಿಗೆ ರಸ್ತೆ
ಸಿಪಿಟಿ.ಬಿ. ಕಾಲೋನಿ, ಕೈಗಾರಿಕಾ ಬಡಾವಣೆ
ವಿಶ್ವೇಶ್ವರನಗರ ೨ನೇ ಹಂತ, ಮೈಸೂರು
ಸಂಚಾರಿ ದೂರವಾಣಿ : ೯೨೪೨೨೦೧೫೪೫

## ಡಾ. ಬಿ.ವಿ. ವಸಂತಕುಮಾರ್

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಡಾ.** ಬಿ.ವಿ ವಸಂತಕುಮಾರ್ ಅವರು ೧೯೬೭ರ ಜುಲೈ ೨೦ ರಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದವರು. ತಮ್ಮ ತವರೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಪ್ರೌಢಶಾಲೆ ಹಾಗೂ ಕಾಲೇಜು ಶಿಕ್ಷಣವನ್ನು ಚಿತ್ರದುರ್ಗದಲ್ಲಿ ಅಭ್ಯಾಸಿಸಿದ್ದಾರೆ. ಬಿ.ಎ ಪದವಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಐದನೇ ರ್‍ಯಾಂಕ್ ಗಳಿಸಿ ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಹೆಮ್ಮೆಯ ಪ್ರತಿಭಾವಂತ ವಿದ್ಯಾರ್ಥಿ ಎಂದೆನಿಸಿದರು. ವಿದ್ಯಾರ್ಥಿ ದೆಸೆಯಿಂದಲೂ ವಿದ್ಯಾರ್ಥಿ ಚಳವಳಿಗಳ ನಾಯಕತ್ವ ವಹಿಸಿ ಬೆಳೆದ ಇವರು ೧೯೯೦ರಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ. ಪದವಿಯನ್ನು ನಾಲ್ಕು ಚಿನ್ನದ ಪದಕಗಳು ಹಾಗೂ ಮೂರು ನಗದು ಬಹುಮಾನಗಳೊಂದಿಗೆ ಪ್ರಥಮ ರ್‍ಯಾಂಕ್ ಪಡೆದರು. ೧೯೯೫ರಲ್ಲಿ ಅದೇ ವಿಶ್ವವಿದ್ಯಾಲಯದಿಂದ ಡಾ.ಆರ್ ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ 'ಕೈಲಾಸಂ ಕನ್ನಡ–ಒಂದು ಅಧ್ಯಯನ' ಎಂಬ ವಿಷಯಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

೧೯೯೨ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಕನ್ನಡ ಉಪನ್ಯಾಸಕರಾಗಿ ಆಯ್ಕೆಯಾದ ಶ್ರೀಯುತರು ಶಿಕಾರಿಪುರ, ಕೊಣನೂರು, ಕಡೂರುಗಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿ ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವೃತ್ತಿ ಜೀವನದಲ್ಲಿ ಏಳು ವರ್ಷ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಯಾಗಿ ಹಾಗೂ ಒಂದು ವರ್ಷ ಚಿಕ್ಕಮಗಳೂರು ಜಿಲ್ಲಾ ನೋಡಲ್ ಅಧಿಕಾರಿಯಾಗಿ ಸೇವಾಕಾರ್ಯ ಕೈಗೊಂಡಿದ್ದಾರೆ. ೧೯೯೮ರಿಂದ ೨೦೦೨ರ ವರೆಗೆ ಶಿಕಾರಿಪುರ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಇವರು ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ವೇದಿಕೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಇವರು ೧೯೯೨ರಲ್ಲೇ ಡಾ.ಪಿ.ಕೆ. ರಾಜಶೇಖರ್ ಅವರೊಡನೆ ಸೇರಿ 'ಪದ ವಿವರಣ ಕೋಶ' ಎಂಬ ಭಾಷಾವಿಜ್ಞಾನದ ಹಿನ್ನೆಲೆಯ ನಿಷ್ಪತ್ತಿ ಕೋಶವನ್ನು ಪ್ರಕಟಿಸಿದ್ದಾರೆ. ಅನಂತರದಲ್ಲಿ 'ಕುಮುದಿನಿಯ ಕಿರಣಗಳು' ಎಂಬ ವಿದ್ಯಾರ್ಥಿಗಳ ಬರಹದ ಕೃತಿಯನ್ನು ಸಂಪಾದಿಸಿದ್ದಾರೆ. ಅಲ್ಲದೆ, ಬೆಟ್ಟದ ಮುಡಿಗೆ ಹೂವು (ಕವನ ಸಂಕಲನ) ಚೇತನ ಚಿತ್ತಾರ, ಒಲುಮೆಯ ಕುಲುಮೆಯಲ್ಲಿ, ದೇವರದಾಸಿಮಯ್ಯ ಮತ್ತು ಅನಂತತೆ, ಪಿ. ಲಂಕೇಶ್, ಡೆಪ್ಯುಟಿ ಚೆನ್ನಬಸಪ್ಪ, ಕಾಯಕ ಮೀಮಾಂಸೆ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಜೋಗೇರ ಹುಡುಗಿ, ಸಹಕಾರ ಚಳವಳಿ ಎಂಬ ಕೃತಿಗಳನ್ನು ಸಂಪಾದಿಸಿದ್ದಾರೆ. 'ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದಲ್ಲಿ ಯು.ಜಿ.ಸಿ.ಯ ಮೈನರ್ ರಿಸರ್ಚ್ ಪ್ರಾಜೆಕ್ಟ್‌ನ್ನು ಪೂರ್ಣಗೊಳಿಸಿದ್ದಾರೆ. 'ಜಲದ ಕಣ್ಣು', 'ವಿಚಾರ ಸಂಚಾರ', 'ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ' ಎಂಬ ಇವರ ಕೃತಿಗಳು ಪ್ರಕಟವಾಗಬೇಕಿದೆ. ಇವರ ತಂದೆ ದಿ॥ ಬಿ. ವೀರಭದ್ರಪ್ಪನವರ ಪಂಪಭಾರತವನ್ನು ಕುರಿತ ಐವತ್ತು ಸಂಶೋಧನಾ ಲೇಖನಗಳ ಸಂಪಾದಿತ ಕೃತಿಯನ್ನು ಸಿದ್ಧಪಡಿಸುತ್ತಿದ್ದಾರೆ.

ಶ್ರೀಯುತರು ಕುವೆಂಪು ವಿಶ್ವವಿದ್ಯಾಲಯದ ಪ್ರಥಮ ಬಿ.ಎ ವಿದ್ಯಾರ್ಥಿಗಳಿಗೆ ಭಾಷಾ ಪಠ್ಯಪುಸ್ತಕವಾಗಿ 'ಪ್ರಾಚೀನ ಕನ್ನಡ ಕಾವ್ಯ : ಭಾಗ–೩' ಎಂಬ ಕೃತಿಯನ್ನು ಡಾ. ಸಿ.ಎಂ. ವಿಶ್ವನಾಥಯ್ಯ ಅವರೊಂದಿಗೆ ಸಂಪಾದಿಸಿ ಕೊಟ್ಟಿದ್ದಾರೆ. ಡಾ.ಬಿ.ವಿ. ವಸಂತಕುಮಾರ್ ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

q

‘ಅಕ್ಷರ’, ಅಂಚೆ: ಮುದ್ರಾಡಿ – ೫೭೬೧೪೫
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ
ಸಂಚಾರಿ ದೂರವಾಣಿ : ೯೪೪೮೪ ೯೧೫೭೯



# ಶ್ರೀ ಅಂಬಾತನಯ ಮುದ್ರಾಡಿ

ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ವೃತ್ತಿಯಲ್ಲಿ ಶಿಕ್ಷಕರಾದರೂ ಸಹ ಪ್ರವೃತ್ತಿಯಲ್ಲಿ ಅವರೊಬ್ಬ ಸಾಹಿತಿ, ಯಕ್ಷಗಾನ ಕಲಾವಿದ, ಹರಿಕಥಾ ವಿದ್ವಾಂಸ, ಗಮಕಿ–ಈ ಎಲ್ಲವುಗಳಿಗೆ ಪಾತ್ರರಾಗಿರುವವರು ಶ್ರೀ ಅಂಬಾತನಯ ಮುದ್ರಾಡಿ. ಉಡುಪಿ ಜಿಲ್ಲೆಯ ಮುದ್ರಾಡಿ ಗ್ರಾಮದಲ್ಲಿ ೦೪–೦೬–೧೯೩೫ರಲ್ಲಿ ಜನಿಸಿದ ಶ್ರೀಯುತರು ತಮ್ಮ ವೃತ್ತಿಬದುಕಿನಲ್ಲಿ ವಿದ್ಯಾರ್ಥಿಗಳ ಜ್ಞಾನತೃಷೆಯನ್ನು ಮಾತ್ರ ನೀಗಿಸದೆ ಅವರಲ್ಲಿ ಅಡಗಿರುವ ಸುಪ್ತಪ್ರತಿಭೆಗಳನ್ನು ಹೊರತರುವ ಪ್ರಯತ್ನ ಮಾಡಿದವರು.

ನಾಡಿನಾದ್ಯಂತ ಶಿಕ್ಷಕರಿಗಾಗಿ ನಡೆಯುವ ೧೦೦ಕ್ಕೂ ಅಧಿಕ ಭಾಷಾ ಕಮ್ಮಟಗಳಲ್ಲಿ ಕನ್ನಡ ವಿಷಯ ಸಂಪನ್ಮೂಲ ವ್ಯಕ್ತಿಯಾಗಿ ಇವರು ಭಾಗವಹಿಸಿದ್ದಾರೆ. ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಯ ಸಂಕ್ಷಿಪ್ತ ಮಾಹಿತಿ ನೀಡುವ ‘ಶಿಕ್ಷಣರಂಗ’ ಹಾಗೂ ‘ಶಿಕ್ಷಣವಾಣಿ’ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ ಕ್ರಿಯಾಶೀಲವಾಗಿ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯ ಕೃಷಿಯಲ್ಲೂ ಸಹ ಸಿದ್ಧಹಸ್ತರಾಗಿರುವ ಶ್ರೀಯುತರ ಪ್ರಕಟವಾಗಿರುವ ಪ್ರಮುಖ ಕೃತಿಗಳೆಂದರೆ ಪರಿತ್ಯಕ್ತ (ನಾಟಕ), ಹೆಸರಿಲ್ಲದವನ ಹೆಸರು, ಮಹಾಸತಿ ಅನಸೂಯಾ, ಅಹಲ್ಯೋದ್ಧಾರ, ಭಕ್ತಕುಚೇಲ, ಮಂಜುಳಗಾನ, ಭಕ್ತ ಪ್ರಹ್ಲಾದ ಇನ್ನೂ ಮುಂತಾದವುಗಳು. ಇನ್ನೂ ಬಹಳಷ್ಟು ಕೃತಿಗಳು ಪ್ರಕಟವಾಗಬೇಕಿವೆ.

ಸ್ವತಃ ಯಕ್ಷಗಾನ ಕಲಾವಿದರಾದ ಶ್ರೀಯುತರು ‘ಇಡಗುಂಜಿ’ ಮತ್ತು ‘ಅಮೃತೇಶ್ವರಿ’ ಮೇಳಗಳಲ್ಲಿ ತಮ್ಮ ಕಲಾವಂತಿಕೆಯನ್ನು ಮೆರೆದಿದ್ದಾರೆ. ಸುಮಾರು ನಲವತ್ತೈದು ವರ್ಷಗಳಿಂದ ಹರಿಕೀರ್ತನ ಸೇವೆಯಲ್ಲಿ ತೊಡಗಿಸಿಕೊಂಡಿರುವ ಮುದ್ರಾಡಿಯವರು ರಾಜ್ಯ ಮತ್ತು ಅಂತರರಾಜ್ಯಗಳಲ್ಲೂ ಸಹ ಪ್ರದರ್ಶನ ನೀಡಿದ ಗೌರವಕ್ಕೆ ಪಾತ್ರರಾಗಿದ್ದಾರೆ. ಪಂಪಭಾರತ, ತೊರವೆ ರಾಮಾಯಣ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಮಹಾಕಾವ್ಯಗಳ ಕುರಿತು ವಿವಿಧೆಡೆಗಳಲ್ಲಿ ಗಮಕ ಮತ್ತು ವ್ಯಾಖ್ಯಾನ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಸಂಘಟಕರಾಗಿಯೂ ಸಹ ಗುರುತಿಸಿಕೊಂಡಿರುವ ಮುದ್ರಾಡಿಯವರು ಹೆಬ್ರಿ ಕನ್ನಡ ಸಾಹಿತ್ಯ ಸಂಘದ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಮೂವತ್ತು ವರ್ಷಗಳ ಕಾಲ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ಜೊತೆಗೆ ಕಾರ್ಕಳ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಹೀಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ತಮ್ಮನ್ನು ಅಪಾರವಾಗಿ ತೊಡಗಿಸಿಕೊಂಡಿರುವ ಶ್ರೀಯುತರಿಗೆ ಹಲವಾರು ಸಮ್ಮಾನಗಳು ಸಂದಿವೆ. ಜೊತೆಗೆ ಯಾದವರಾವ್ ಜೋಶಿ ಪ್ರಶಸ್ತಿ, ರಾಮವಿಠಲ ಪ್ರಶಸ್ತಿ, ಸಾಹಿತ್ಯಸಿರಿ, ಸಾಹಿತ್ಯ ಕಲಾವಾಚಸ್ಪತಿ ಮುಂತಾದ ಪುರಸ್ಕಾರಗಳು ದೊರೆತಿವೆ. ೨೦೦೮ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯು ಕೂಡಾ ಮುದ್ರಾಡಿಯವರಿಗೆ ಸಂದಿರುವುದು ಉಲ್ಲೇಖಾರ್ಹ.

೧

Associate Professor
School of Arts & Aesthetics
Jawaharlal Nehru University
New Delhi - 110 067
Mobile : 09212706309



## ಡಾ. ಎಚ್. ಎಸ್. ಶಿವಪ್ರಕಾಶ್

ಸಹ ಆಯ್ಕೆ ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಅಂತರರಾಷ್ಟ್ರೀಯ ಮಟ್ಟದ ನಾಟಕಕಾರರಾಗಿ, ಕವಿಯಾಗಿ ಪ್ರಸಿದ್ಧಿ ಪಡೆದಿರುವ ಬಹುಮುಖ ಪ್ರತಿಭಾವಂತರು ಡಾ. ಎಚ್. ಎಸ್. ಶಿವಪ್ರಕಾಶ್.

೧೯೫೪ರಲ್ಲಿ ಜನಿಸಿದ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇಂಗ್ಲಿಷ್ ಉಪನ್ಯಾಸಕರಾಗಿ ತಮ್ಮ ವೃತ್ತಿಬದುಕನ್ನು ಆರಂಭಿಸಿದ ಶ್ರೀಯುತರು ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿಯಲ್ಲಿ ನಿಯತಕಾಲಿಕೆಗಳ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ನವದೆಹಲಿಯ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯ (JNU)ದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಅನುಭಾವ, ಪುರಾಣ, ಚರಿತ್ರೆ ಮುಂತಾದ ಪರಿಕರಗಳನ್ನು ಬಳಸಿಕೊಂಡು ಸಮಕಾಲೀನ ಬದುಕಿನ ದರ್ಶನವನ್ನು ಕಟ್ಟಿಕೊಡುವ ಧೀಮಂತ ಲೇಖಕ. 'ಮಳೆ ಬಿದ್ದ ನೆಲದಲ್ಲಿ', 'ಅಣುಕ್ಷಣ ಚಿಂತೆ' 'ಸೂರ್ಯಜಲ', 'ನವಿಲುನಾಗರ' – ಇವುಗಳು ಶಿವಪ್ರಕಾಶರ ಪ್ರಮುಖ ಕವನ ಸಂಕಲನಗಳು. ಇವರ ಪ್ರಮುಖ ನಾಟಕಗಳೆಂದರೆ 'ಮಂಟೇಸ್ವಾಮಿ ಕಥಾ ಪ್ರಸಂಗ', 'ಮಾದಾರಿ ಮಾದಯ್ಯ', 'ಮಹಾಚೈತ್ರ'. ಇವರ 'ಮಹಾಚೈತ್ರ' ಕೃತಿ ಬಹಳಷ್ಟು ಚರ್ಚೆಗೆ ವಿವಾದಕ್ಕೆ ದಾರಿಮಾಡಿಕೊಟ್ಟಿದೆ. ಅನುವಾದ ಕ್ಷೇತ್ರದಲ್ಲೂ ಅಪ್ರತಿಮ ಸಾಧನೆ ಮಾಡಿರುವ ಶ್ರೀಯುತರ 'ಕಿಂಗ್ ಲಿಯರ್' ಎಂಬ ಅನುವಾದಿತ ಕೃತಿಯು ೧೯೮೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಅನುವಾದಿತ ಕೃತಿ ಗೌರವಕ್ಕೆ ಪಾತ್ರವಾಗಿದೆ. ಬೇಂದ್ರೆ, ತೇಜಸ್ವಿ, ದೇವನೂರು ಮಹಾದೇವ ಮುಂತಾದ ಕನ್ನಡದ ಬಹುಮುಖ್ಯ ಲೇಖಕರ ಕೃತಿಗಳನ್ನು ಇಂಗ್ಲಿಷಿನಲ್ಲಿ ಪರಿಚಯಿಸಿದ್ದಾರೆ.

ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಸಾಹಿತ್ಯ–ನಾಟಕಗಳನ್ನು ಕುರಿತ ಪ್ರಬಂಧಗಳನ್ನು ಮಂಡಿಸಿದ್ದಾರೆ. ಬಹುಭಾಷಾ ಪ್ರವೀಣರಾದ ಇವರು ಅನೇಕ ರಾಷ್ಟ್ರೀಯ ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

೧೯೯೦ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 'ಮಾದಾರಿ ಮಾದಯ್ಯ' ನಾಟಕಕ್ಕೆ ಪಶ್ಚಿಮ ಬಂಗಾಲದ ನಾಟಕ ಪುರಸ್ಕಾರ ಲಭಿಸಿದೆ. ೨೦೦೫ರಲ್ಲಿ ಕರ್ನಾಟಕ ಸರ್ಕಾರ ನೀಡುವ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಹೀಗೆ ಹತ್ತು ಹಲವು ಗೌರವಗಳಿಗೆ ಪಾತ್ರವಾಗಿರುವ ಡಾ. ಎಚ್.ಎಸ್. ಶಿವಪ್ರಕಾಶ್‌ರವರು ನಾಟಕ, ಕಾವ್ಯ, ವಿಮರ್ಶೆ, ಅನುವಾದ ಕ್ಷೇತ್ರಗಳ ಅನನ್ಯ ಪ್ರತಿಭೆ.

q



‘ಅರಿವು’, ಫ್ಲಾಟ್ ನಂ. ೭೪
ತಪೋವನ ನಗರ, ಹಳಿಯಾಳ ರಸ್ತೆ
ಧಾರವಾಡ – ೫೮೦ ೦೦೩
ದೂರವಾಣಿ : ೦೮೩೬-೨೪೭೨೯೫

## ಡಾ. ಶಿವಾನಂದ ಕೆಳಗಿನಮನಿ

ಸಹ ಆಯ್ಕೆ ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಜಾ**ನಪದ ಮತ್ತು ಬುಡಕಟ್ಟು ಅಧ್ಯಯನಗಳಲ್ಲಿ ಅಪಾರ ಪರಿಶ್ರಮ ಹೊಂದಿರುವ ಶಿವಾನಂದ ಕೆಳಗಿನಮನಿಯವರು ಮೂಲತಃ ಹಾವೇರಿ ಜಿಲ್ಲೆಯವರು. ಪ್ರಸ್ತುತ ಧಾರವಾಡದ ಕರ್ನಾಟಕ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದಲ್ಲಿ ಆಯ್ಕೆ ಶ್ರೇಣಿಯ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಲೇಖಕರಾಗಿ, ವಿಮರ್ಶಕರಾಗಿ ಮತ್ತು ಸಂಪಾದಕರಾಗಿ ಪ್ರಸಿದ್ಧಿ ಪಡೆದಿರುವ ಶ್ರೀಯುತರು “ಗೋಪಾಲಕೃಷ್ಣ ಅಡಿಗರ ನವ್ಯಕಾವ್ಯ ಒಂದು ಅಧ್ಯಯನ’ ಎಂಬ ಮಹಾಪ್ರಬಂಧಕ್ಕಾಗಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ.

ವಿಗಡ ಚರಿತೆಯ ಬೆಡಗು ಹಾಗೂ ಸಾಹಿತ್ಯ ಸಂಸ್ಕೃತಿಯ ಮುಖಾಮುಖಿ ಎಂಬ ವಿಮರ್ಶಾ ಕೃತಿಗಳು, ಹಳ್ಳಿಕೇರಿ ಗುದ್ಲೆಪ್ಪ, ಸಿದ್ದಪ್ಪ ಕಂಬಳಿ ಎಂಬ ವ್ಯಕ್ತಿಚಿತ್ರಗಳು, ಕಾಡಿನ ಕೊಳಲಿಗೆ ನಾಡಿನ ಸ್ವರ, ಸ್ನೇಹ ಸಂಪದ ಎಂಬ ಸಂಪಾದನ ಕೃತಿಗಳು, ಮತ್ತು ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ, ಸುವರ್ಣನಗರಿ ಸುಣಕಲ್ಲ ಬಿದರಿ ಎಂಬ ಸಂಶೋಧನ ಗ್ರಂಥಗಳನ್ನು ರಚಿಸಿ ಉತ್ತಮ ಬರಹಗಾರರಾಗಿ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

ಉತ್ತಮ ಲೇಖಕರಾದ ಶಿವಾನಂದ ಕೆಳಗಿನಮನಿಯವರ ಅನೇಕ ಲೇಖನಗಳು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ ಪ್ರಕಟಣೆಯ ಹಂತದಲ್ಲಿರುವ ಇತರೆ ಕೃತಿಗಳೆಂದರೆ ಶ್ರೀರಂಗ ಸಂಪದ (ಸಂಪಾದನೆ), ಕರ್ನಾಟಕ ಏಕೀಕರಣಕ್ಕೆ ಧಾರವಾಡ ಜಿಲ್ಲೆಯ ಕೊಡುಗೆ (ಸಂಶೋಧನೆ), ಸುಮಧುರ ಯಾತನೆ (ವಿಮರ್ಶೆ), ಬೈರರ ಸಂಸ್ಕೃತಿಯಲ್ಲಿ ಮಹಿಳೆ (ಸಂಶೋಧನೆ) ಇತ್ಯಾದಿಗಳು. ಶ್ರೀಯುತರ ಮಾರ್ಗದರ್ಶನದಲ್ಲಿ ಹಲವಾರು ಸಂಶೋಧನಾ ವಿದ್ಯಾರ್ಥಿಗಳು ಪಿಎಚ್.ಡಿ. ಪದವಿ ಪಡೆದಿದ್ದಾರೆ. ಇವರ ಸಾಹಿತ್ಯ ಕೃಷಿಗೆ ೨೦೦೬ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡ ದೊರೆತಿದೆ

q

### ‘ಅನಿಕೇತನ’ ತ್ರೈಮಾಸಿಕ ಪತ್ರಿಕೆ

*ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆ ‘ಅನಿಕೇತನ’ ತ್ರೈಮಾಸಿಕ ಪತ್ರಿಕೆಯ ಕನ್ನಡ ಸಂಚಿಕೆಗೆ ಸಂಪಾದಕರನ್ನಾಗಿ ಡಾ. ಚಂದ್ರಶೇಖರ ನಂಗಲಿ, ಡಾ. ಮೃತ್ಯುಂಜಯ ರುಮಾಲೆ, ಶ್ರೀ ಲಕ್ಷ್ಮೀಪತಿ ಕೋಲಾರ ಅವರನ್ನು ಹಾಗೂ ಇಂಗ್ಲೀಷ್ ಸಂಚಿಕೆಗೆ ಡಾ. ಎಚ್.ಎಸ್. ಶಿವಪ್ರಕಾಶ್, ಶ್ರೀ ಉಮೇಶ ಚಂದ್ರ, ಪ್ರೊ. ಪರಿಮಳಾ ನಾಯಕ್ ಅವರನ್ನು ಹೊಸ ಆಯ್ಕೆ ಸಮಿತಿ ನೇಮಿಸಿದೆ.*

### ಮೊದಲ ವರ್ಷದ ಅವಧಿಗೆ ಅಕಾಡೆಮಿಯ ಸ್ಥಾಯಿ ಸಮಿತಿ ಸದಸ್ಯರು

೧. *ಶ್ರೀ ಕತ್ತಿಗೆ ಚನ್ನಪ್ಪ*
೨. *ಡಾ. ಚಂದ್ರಶೇಖರ ವಸ್ತ್ರದ*
೩. *ಡಾ. ಬಾಳಾಸಾಹೇಬ ಲೋಕಾಪುರ*
೪. *ಡಾ. ಜಯಶ್ರೀ ದಂಡೆ*




ಪಿ.ಡಬ್ಲ್ಯು.ಡಿ. ಕ್ವಾರ್ಟರ್ಸ್
ಜಮಖಂಡಿ – ೫೮೭ ೩೦೧
ಬಾಗಲಕೋಟ ಜಿಲ್ಲೆ
ಸಂಚಾರಿ ದೂರವಾಣಿ : ೯೮೪೫೦ ೨೮೯೨೩


# ಶ್ರೀಮತಿ ಶಾರದಾ ಮುಳ್ಳೂರ

ಸಹ ಆಯ್ಕೆ ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಮೂ**ಲತಃ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ೨೪–೧೧–೧೯೬೫ ರಂದು ಜನಿಸಿದ ಶಾರದಾ ಮುಳ್ಳೂರ ಅವರು ಸದ್ಯ ಬಾಗಲಕೋಟ ಜಿಲ್ಲೆಯ ಜಮಖಂಡಿಯಲ್ಲಿ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಉತ್ತಮ ವಾಕ್ಪಟುತ್ವ, ಚಿಂತನಪರ ಚರ್ಚೆಗಳು, ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ರಂಗದ ವಿಭಿನ್ನವಲಯದ ಸಕ್ರಿಯ ತೊಡಗಿಕೊಳ್ಳುವಿಕೆಯೊಂದಿಗೆ ವ್ಯಾಸಂಗದ ಅವಧಿ ವ್ಯಕ್ತಿತ್ವದ ಮುಖಗಳನ್ನು ಸಜ್ಜುಗೊಳಿಸಿತು. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಕ್ರೀಡೆಯಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

ಏಕಾಂಗಿ, ಆರದ ದೀಪದ ಆಸರೆ ಹಿಡಿದು, ಮಂದಹಾಸ, ನೀರಜ, ಕನ್ನಡಿ ಮುಂತಾದ ಕವನ ಸಂಕಲನಗಳಲ್ಲಿ ಜಪಾನಿ ಹಾಯಿಕುಗಳನ್ನು, ಮಕ್ಕಳ ಕವಿತೆಗಳನ್ನು, ಕಾವ್ಯ, ಚುಟುಕುಗಳನ್ನು ವಿಶೇಷವಾಗಿ ಗಜಲ್ ರಚನೆಯಲ್ಲಿ ತೊಡಗಿಸಿಕೊಂಡ ಕೆಲವರಲ್ಲಿ ಇವರೂ ಒಬ್ಬರು.

ಮಕ್ಕಳು ಬರೆದ ಕಥೆಗಳನ್ನು 'ಅಂಕುರ'ದಲ್ಲಿ, ಕವಿತೆಗಳನ್ನು 'ಹತ್ತರೊಳಗೆ' ಕೃತಿಯಲ್ಲಿ, ಕವಯಿತ್ರಿಯರ ಕವಿತೆಗಳನ್ನು 'ಸೀಮೆ' ಕೃತಿಯಲ್ಲಿ ಸಂಪಾದಿಸಿದ್ದಾರೆ. ಅಲ್ಲದೇ ಮುತ್ತಿನಕಂತಿ, ನೆನವಮನ, ಉದಯರವಿ ಇವರ ಸಂಪಾದಿತ ಕೃತಿಗಳು.

ಆಕಾಶವಾಣಿ ಧಾರವಾಡ ಮತ್ತು ಗುಲಬರ್ಗಾದಿಂದ ಕವಿತೆಗಳ ವಾಚನ ಮಾಡಿದ್ದಾರೆ. ಬೆಂಗಳೂರು ಬಾನುಲಿ ಕೇಂದ್ರದಿಂದ ಎರಡು ನಾಟಕಗಳು ಪ್ರಸಾರ ಕಂಡಿವೆ. ಹೊಸತು, ಸಂವಾದ, ಮಯೂರ ... ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ 'ಗಜಲ್'ಗಳು ವಿಶೇಷವಾಗಿ ಗಮನ ಸೆಳೆದಿವೆ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ನವರಸಪುರ ಉತ್ಸವ, ಚಾಲುಕ್ಯೋತ್ಸವ, ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ... ಮುಂತಾದ ಕವಿಗೋಷ್ಠಿಗಳಲ್ಲಿ ಪಾಲ್ಗೊಂಡಿದ್ದಾರೆ.

ರಾಜ್ಯಮಕ್ಕಳ ಸಾಹಿತ್ಯ ವೇದಿಕೆ ತಾಲೂಕಾ ಅಧ್ಯಕ್ಷೆಯಾಗಿ, ದೆಹಲಿಯ ಅಖಿಲ ಭಾರತ ಕವಯಿತ್ರಿಯರ ಸಂಘದ ಸದಸ್ಯೆಯಾಗಿ, ಅಖಿಲ ಕರ್ನಾಟಕ ಲೇಖಕಿಯರ ಸಂಘದ ಸದಸ್ಯೆಯಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಜಾಗೃತ ಸಮಿತಿ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಸಾಹಿತ್ಯ, ಶಿಕ್ಷಣ, ಮಹಿಳಾ ಸಬಲೀಕರಣದಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ.

ಗೋದಾವರಿ ಕಾವ್ಯ ಪುರಸ್ಕಾರ, ಕಾಯಕಯೋಗಿ ಸನ್ಮಾನ, ಮಕ್ಕಳಮನೆ ಬೆಂಗಳೂರಿಂದ ಅತ್ಯುತ್ತಮ ಕೃತಿರತ್ನ ಪ್ರಶಸ್ತಿ, ಅತ್ಯುತ್ತಮ ಸಂಘಟಕಿ ಪ್ರಶಸ್ತಿ ಇವರಿಗೆ ಸಂದಿವೆ.

q



# ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ

ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಕ**ನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಉಪ ನಿರ್ದೇಶಕರರಾಗಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ಆಡಳಿತಾಕಾಧಿಕಾರಿಯಾಗಿ ಸೇವೆ ಸಲ್ಲಿಸಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಕನ್ನಡ ಸ್ನಾತಕೋತ್ತರ ಪದವೀಧರರು. ಕನ್ನಡ ಉಪನ್ಯಾಸಕರಾಗಿ ತಮ್ಮ ವೃತ್ತಿಬದುಕನ್ನು ಆರಂಭಿಸಿದ ಶ್ರೀಯುತರು ಆಗಸ್ಟ್ ೩೧, ೨೦೦೧ರಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ನೇಮಕಗೊಂಡು ಅಂದಿನಿಂದ ಇಂದಿನವರೆಗೂ ಅಕಾಡೆಮಿ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಬಂದು ಉತ್ತಮ ಆಡಳಿತಗಾರರೆನ್ನಿಸಿಕೊಂಡಿದ್ದಾರೆ. ಕೇವಲ ಇಲಾಖೆಯ ಕಾರ್ಯಕಲಾಪಗಳಲ್ಲಿ ಮಾತ್ರ ಮಗ್ನರಾಗದೇ ಕೆಲವೊಮ್ಮೆ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ವಿಷಯ ಮಂಡನೆ ಮಾಡಿದ್ದಾರೆ.

ಸದಾಕಾಲ ಕಾರ್ಯಭಾರದ ಒತ್ತಡದಲ್ಲಿದ್ದರೂ ಸಹ ನಗು ಮೊಗದ ಶ್ರೀ ಮಲ್ಲಿಕಾರ್ಜುನಸ್ವಾಮಿ ತನ್ನಲ್ಲಿನ ಕವಿತ್ವಕ್ಕೆ ಕಿಂಚಿತ್ತೂ ಅಡ್ಡಿಯಾಗದಂತೆ ನೋಡಿಕೊಂಡಿದ್ದಾರೆ. ಇದರ ಪ್ರತಿಫಲ ವಾಗಿಯೇ ಶ್ರೀಯುತರ ಮೊದಲ ಕವನ ಸಂಕಲನ 'ಮೊದಲ ಮೊಗ್ಗು' (೨೦೦೫)ರಲ್ಲಿಯೇ ಪ್ರಕಟಗೊಂಡಿದೆ.

q


ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೨೧೧೭೩೦



ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರೊ. ಎಂ. ಎಚ್. ಕೃಷ್ಣಯ್ಯ
ಅಧ್ಯಕ್ಷರು

ಸದಸ್ಯರು

ಶ್ರೀ ಕತ್ತಿಗೆ ಚನ್ನಪ್ಪ
ಡಾ. ಮೃತ್ಯುಂಜಯ ರುಮಾಲೆ
ಡಾ. ಚಂದ್ರಶೇಖರ ನಂಗಲಿ
ಶ್ರೀ ಬಾಲಗುರುಮೂರ್ತಿ
ಶ್ರೀ ಚಂದ್ರಶೇಖರ ವಸ್ತ್ರದ
ಡಾ. ಬಾಳಾ ಸಾಹೇಬ ಲೋಕಾಪುರ
ಡಾ. ಜಯಶ್ರೀ ದಂಡೆ
ಡಾ. ಧಬಾಲೆ ಗುರುಲಿಂಗಪ್ಪ ಶಂಕರೆಪ್ಪ
ಡಾ. ಬಿ.ವಿ. ವಸಂತಕುಮಾರ್
ಶ್ರೀ ಅಂಬಾತನಯ ಮುದ್ರಾಡಿ

ಸಹ ಆಯ್ಕೆ ಸದಸ್ಯರು

ಡಾ. ಎಚ್. ಎಸ್. ಶಿವಪ್ರಕಾಶ್
ಡಾ. ಶಿವಾನಂದ ಕೆಳಗಿನಮನಿ
ಶ್ರೀಮತಿ ಶಾರದಾ ಮುಳ್ಳೂರ

ಪದನಿಮಿತ್ತ ಸದಸ್ಯರು

ಶ್ರೀ ವಿ. ಮುನಿವೀರಪ್ಪ
ಅರ್ಥ ಸದಸ್ಯರು

ಶ್ರೀ ಬಿ.ಟಿ. ಮುನಿರಾಜಯ್ಯ
ಜಂಟಿ ನಿರ್ದೇಶಕರು (ಸಾಮಾನ್ಯ)

ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್

ಪತ್ರಿಕಾ ಮಾರ್ದನಿಗಳು

# ಕಾಲದ ಅಗತ್ಯಗಳಿಗೆ ಸ್ಪಂದಿಸುವೆ : ಕೃಷ್ಣಯ್ಯ

*ಸಂದರ್ಶಕರು : ಶಿವರಂಜನ್ ಸತ್ಯಂಪೇಟೆ*

**ಕ**ರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಅಧ್ಯಾಪಕ, ರೀಡರ್, ಪ್ರೊಫೆಸರ್ ಆಗಿ ಮೈಸೂರು, ಬೆಂಗಳೂರು, ಕೋಲಾರ, ಮಂಗಳೂರು ಇತ್ಯಾದಿ ಕಡೆಗಳಲ್ಲಿ ಕೆಲಸ ಮಾಡಿದವರು. ಸುಮಾರು ವರ್ಷಗಳಿಂದ ಸಾಹಿತ್ಯ, ಸಂಪಾದನೆ, ಪತ್ರಿಕಾ ಬರವಣಿಗೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು.

ಕಾವ್ಯ ಭಾಷೆ, ಆಲೋಕನ, ಶೃಂಗಾರ ಲಹರಿ, ಆರ್.ಎಂ. ಹಡಪದ, ಸಾಲು ದೀಪಗಳು, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಸೇರಿದಂತೆ ವಿಮರ್ಶೆ, ಚಿತ್ರಕಲೆ, ಸಂಪಾದನೆ ಮುಂತಾದ ಕ್ಷೇತ್ರಗಳಲ್ಲಿ ಕೃಷಿಗೈದಿದ್ದಾರೆ.

ಮೈಸೂರು ನಗರದ ಮಧ್ಯಮ ವರ್ಗದ ಕುಟುಂಬದಲ್ಲಿ (೨೧-೭-೧೯೩೭) ಜನಿಸಿದ ಇವರೊಂದಿಗೆ ಮಾತನಾಡುತ್ತಿದ್ದರೆ ಸಾಹಿತ್ಯ ಲೋಕದ ಹೊಸ ಆಶಯ-ಆಲೋಚನೆಗಳು ತಿಳಿದುಬರುತ್ತವೆ.

ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಈಚೆಗೆ ನಡೆದ 'ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ' ಕುರಿತು ಏರ್ಪಡಿಸಿದ ಸಮಾರಂಭಕ್ಕೆ ಇಲ್ಲಿಗೆ ಆಗಮಿಸಿದ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿ ಕಾರ್ಯ ಯೋಜನೆಗಳ ಕುರಿತು 'ಪ್ರಜಾವಾಣಿ' ಮಾತನಾಡಿಸಿತು.

l **ತಾವು ಅಧ್ಯಕ್ಷರಾದಾಗಿನಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು?**

m ಹಳೆಗನ್ನಡ ಕಾವ್ಯದ ಓದಿನ ಭಿನ್ನ ಆಯಾಮಗಳು ಕುರಿತು ಚಾಮರಾಜನಗರದಲ್ಲಿ, ಹಳೆಗನ್ನಡ ಕಾವ್ಯದ ಓದು, ಗಮಕ ಮತ್ತು ಅರ್ಥ ವಿವರಣೆ ಕುರಿತು ಮೈಸೂರಿನಲ್ಲಿ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

l **ಹಮ್ಮಿಕೊಳ್ಳಬೇಕಾಗಿರುವ ಕಾರ್ಯಕ್ರಮಗಳು?**

m ಮಹಿಳಾ ಲೇಖಕಿಯರಿಗೆ ನಾಟಕ ಕಮ್ಮಟ, ಮಕ್ಕಳ ಗೋಷ್ಠಿ, ಕಥಾ ಕಮ್ಮಟ ಮುಂತಾದವವು.

l **ನಿಮ್ಮ ಮುಂದಿರುವ ಕಾರ್ಯ ಯೋಜನೆಗಳೇನು?**

m ಹಿಂದಿನ ಅಧ್ಯಕ್ಷರುಗಳ ಆಲೋಚನೆಯೊಂದಿಗೆ ಇಂದಿನ ಯುವ ಜನರ ಅಗತ್ಯಕ್ಕನುಗುಣವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ತಿಳಿಪಡಿಸಲು ಅಂತರ ಜಾಲದಲ್ಲಿ ಕವಿತೆಯ ಓದು, ಶಿಶು ಸಾಹಿತ್ಯದ ಹಾಡುಗಳು ಅನಿಕೇತನ ತ್ರೈಮಾಸಿಕವನ್ನು ಅಳವಡಿಸಲಾಗುವುದು.

l **ನಾನ್ ಅಕಾಡೆಮಿಕ್ ವಲಯದಲ್ಲಿ ಕನ್ನಡ ಸಾಹಿತ್ಯ ಬೆಳವಣಿಗೆಗೆ ತಮ್ಮ ಯೋಜನೆಗಳೇನು?**

m ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಗಡಿ ಭಾಗಗಳಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ರೂಪಗಳ ಕುರಿತು ವಿಚಾರ ಸಂಕಿರಣ, ಸಂವಾದ, ಚರ್ಚೆಗಳನ್ನು ಏರ್ಪಡಿಸುವ ಮೂಲಕ ಜನರಲ್ಲಿ ಕನ್ನಡ ನಾಡು-ನುಡಿಯ ಬಗ್ಗೆ ಅಭಿಮಾನ ಮೂಡಿಸಲಾಗುವುದು.

ಜಗತ್ತಿನ ಸಾಹಿತ್ಯ ಪರಿಚಯಿಸುವ ಬೃಹತ್ ಗ್ರಂಥಗಳನ್ನು ಹೊರ ತರುವುದರ ಜೊತೆಗೆ ಸಾಹಿತ್ಯ ವಿಮರ್ಶೆ, ಮೀಮಾಂಸೆಗೆ ಸಂಬಂಧಿಸಿದಂತೆ ಹೊಸ ಶಿಸ್ತು, ಆಲೋಚನೆಗಳು ಆರಂಭವಾಗಿವೆ.

ಈ ಕಾಲದ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸುವುದಾಗಿ ಅವರು ತಿಳಿಸಿದರು.

ಕೃಪೆ : ಪ್ರಜಾವಾಣಿ



## ಪ್ರೊ. ಎಂ.ಎಚ್. ಕೃಷ್ಣಯ್ಯರಿಗೆ ಮಾಸ್ತಿ ಪ್ರಶಸ್ತಿ

ಖ್ಯಾತ ಸಾಹಿತಿ, ಕಲಾ ವಿಮರ್ಶಕ ಪ್ರೊ. ಎಂ.ಎಚ್.ಕೃಷ್ಣಯ್ಯ ಅವರಿಗೆ ೨೦೦೯ರ ಸಾಲಿನ ಮಾಸ್ತಿ ಪ್ರಶಸ್ತಿ ಲಭಿಸಿದೆ. ಮಾವಿನಕೆರೆ ರಂಗನಾಥನ್ ಅಧ್ಯಕ್ಷತೆಯಲ್ಲಿ ಪ್ರೊ. ಎಲ್.ಎಸ್. ಶೇಷಗಿರಿರಾವ್, ಜಿ.ಎನ್. ರಂಗನಾಥ್ ರಾವ್, ಡಾ. ಗೀತಾ ರಾಮಾನುಜಮ್ ಮತ್ತು ಶ್ರೀಮತಿ ಉಷಾ ಕೇಸರಿಯವರಿದ್ದ ಸಮಿತಿ ಎಂ.ಎಚ್.ಕೃಷ್ಣಯ್ಯ ಅವರ ಕನ್ನಡ ಸಾಹಿತ್ಯ ಮತ್ತು ಕಲಾಸೇವೆ ಮನಗಂಡು ಮಾಸ್ತಿ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಶಸ್ತಿ ಸಮಿತಿ ವತಿಯಿಂದ ಜೂನ್‌ನಲ್ಲಿ ಬೆಂಗಳೂರು ನಗರದಲ್ಲಿ ಏರ್ಪಡಿಸುವ ಸಮಾರಂಭದಲ್ಲಿ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರಿಗೆ ೨೫ ಸಾವಿರ ರೂ. ನಗದುಳ್ಳ ಮಾಸ್ತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸೌಜನ್ಯ : ಸಂಯುಕ್ತ ಕರ್ನಾಟಕ

# ಮಕ್ಕಳ ಪ್ರತಿಭೆ ಗುರುತಿಸಲು ಸಲಹೆ

**ಮ**ಕ್ಕಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್, ಸಾಹಿತ್ಯ ಅಕಾಡೆಮಿಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ ಎಂದು ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ. ಎಚ್. ಕೃಷ್ಣಯ್ಯ ಸಲಹೆ ನೀಡಿದರು.

ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಸಹಯೋಗದಲ್ಲಿ ಗದಗ ನಗರದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ರಾಜ್ಯ ಮಟ್ಟದ ಮಕ್ಕಳ ಕವಿಗೋಷ್ಠಿಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕವಯಿತ್ರಿ ಪೃಥ್ವಿ ವಕ್ಕುಂದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳ ಮನಸ್ಸಿನ ಮೇಲೆ ಯಾವುದೇ ರೀತಿಯ ಒತ್ತಡ ಹೇರದೆ, ಅವರ ಆಸಕ್ತಿಗೆ ತಕ್ಕಂತೆ ಭವಿಷ್ಯ ರೂಪಿಸಿಕೊಳ್ಳುವ ಸ್ವಾತಂತ್ರ್ಯ ನೀಡಬೇಕು ಎಂದು ಕೋರಿದರು.

ಶಾಸಕ ಶ್ರೀಶೈಲಪ್ಪ ಬಿದರೂರ ಮಾತನಾಡಿ, ಹೂವಿನಂತಿರುವ ಮಕ್ಕಳ ಮನಸ್ಸನ್ನು ಅರ್ಥೈಸಿಕೊಂಡು, ಅವರ ಸುಂದರ ಭವಿಷ್ಯ ರೂಪಿಸಲು ಪಾಲಕರು ಶ್ರಮಿಸಬೇಕು ಎಂದರು.

ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಕೆ.ಎನ್. ಅಕ್ಷತಾ, ದೀಪಾ ಪಾಟೀಲ, ಬಿ.ಸಂಕೇತ್, ಜಿ.ಕೆ. ಕಾವ್ಯ, ಅನುಷಾ ಸಜ್ಜನರ್, ಮುದ್ದು ತೀರ್ಥಹಳ್ಳಿ, ಲೋಕೇಶ ಬಾಬುಲಾಲ, ಚೈತ್ರ ಬೇವಿನ ಗಿಡದ ಅನುಶ್ರೀ ಹೆಗಡೆ, ಆಕಾಶ ಹಿರೇಮಠ, ಶುಭಾಂಗಿನಿ ಕೋರಿ, ಶಿವರಾಜ ಶೆಟ್ಟರ್, ಅನನ್ಯ ಧಬಾಲೆ, ಜ್ಯೋತಿ ಶಾಂಪುರಮಠ, ಗವಿಸಿದ್ದಯ್ಯ ಹಳ್ಳಿಕೇರಿ ಮಠ, ಶಾಂತಶ್ರೀ ಅಂಗಡಿ, ಅನುಪ್ ಅರಳಗುಪ್ಪಿ, ರಶ್ಮಿ ಶ್ರೀಶೈಲ ನಾಗರಾಜ, ಮನೀಷಾ ಪಾಟೀಲ ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವಿತೆಗಳನ್ನು ವಾಚನ ಮಾಡಿದರು.

ಪ್ರಸಿದ್ಧ ಕವಿ ಎಂ.ಡಿ. ಗೋಗೇರಿ ಅಧ್ಯಕ್ಷತೆ ವಹಿಸಿದ್ದರು. ವಿ. ಎನ್. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಚಂದ್ರಶೇಖರ ವಸ್ತ್ರದ ಕಾರ್ಯಕ್ರಮ ನಿರೂಪಿಸಿದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಎ. ಬಿ. ಹಿರೇಮಠ ಎಂ. ಎಂ ಹೆಬ್ಬಾಳ ಉಪಸ್ಥಿತರಿದ್ದರು. ಕಸಾಪ ಕಾರ್ಯದರ್ಶಿ ವಿವೇಕಾನಂದಗೌಡ ಪಾಟೀಲ ಅವರು ಬರೆದಿರುವ 'ಜೋಕಾಲಿ' ಕವನ ಸಂಕಲನವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಐ.ಬಿ. ಬೆನಕೊಪ್ಪ ಕವನ ಸಂಕಲನದ ಕುರಿತು ಮಾತನಾಡಿದರು.

*ಸೌಜನ್ಯ : ಪ್ರಜಾವಾಣಿ*

# ಶಾಸ್ತ್ರೀಯ ಸ್ಥಾನ ಪ್ರಯೋಜನ ಸಿಗಲಿ

**ಕ**ನ್ನಡಕ್ಕೆ ದೊರೆತಿರುವ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪ್ರಯೋಜನ ಕರ್ನಾಟಕ ರಾಜ್ಯದ ಸಮಸ್ತ ಕನ್ನಡಿಗರಿಗೆ ಸಿಕ್ಕಾಗ ಮಾತ್ರ ಶಾಸ್ತ್ರೀಯ ಸ್ಥಾನಮಾನ ಲಭಿಸಿರುವುದು ಸಾರ್ಥಕವಾಗುತ್ತದೆ ಎಂದು ಗುಲ್ಬರ್ಗ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಮುಖ್ಯಸ್ಥ ಡಾ. ಎಂ.ಜಿ. ಬಿರಾದಾರ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಹಾಗೂ ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಕುರಿತು ಗುಲ್ಬರ್ಗಾದಲ್ಲಿ ಆಯೋಜಿಸಿದ್ದ ಒಂದು ದಿನದ ವಿಚಾರ ಸಂಕಿರಣ ಮತ್ತು ಸಂವಾದ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಆಶಯ ಭಾಷಣ ಮಾಡಿ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿರುವ ಹಿನ್ನೆಲೆಯಲ್ಲಿ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷೆ ಸಂಬಂಧಗಳ ವಾಸ್ತವದ ಸ್ಥಿತಿಯ ಮೇಲೆ ಬೆಳಕು ಚೆಲ್ಲುವ ಹಿನ್ನೆಲೆಯಲ್ಲಿ ಈ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ. ಬಸವರಾಜ ಸಬರದ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಸ್ವಾಗತಿಸಿದರು. ಅಕಾಡೆಮಿಯ ಸದಸ್ಯ ಸಂಚಾಲಕಿ ಡಾ. ಜಯಶ್ರೀ ದಂಡೆ ವಂದಿಸಿದರು. ನಂತರ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸವಾಲುಗಳು ಕುರಿತು ನಡೆದ ಮೊದಲನೇ ಗೋಷ್ಠಿಯ ಅಧ್ಯಕ್ಷತೆಯನ್ನು ಪಂಪ ಪ್ರಶಸ್ತಿ ಪುರಸ್ಕೃತ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ ವಹಿಸಿದ್ದರು. ಡಾ. ಎಸ್.ಎಸ್. ಅಂಗಡಿ ಅವರು ಕನ್ನಡ ಸಂಸ್ಕೃತಿಯ ಅನನ್ಯತೆ, ಡಾ. ಲಿಂಗದೇವರು ಹಳೆಮನೆ ಅವರು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ–ಸವಾಲುಗಳು ಹಾಗೂ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಕನ್ನಡ ಭಾಷೆ ಮತ್ತು ಸಾಹಿತ್ಯದ ಪ್ರಾಚೀನತೆ ಕುರಿತು ಪ್ರಬಂಧ ಮಂಡಿಸಿದರು. ಪ್ರೊ. ಚಂದ್ರಶೇಖರ್ ಪಾಟೀಲ ಅಧ್ಯಕ್ಷತೆಯಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ–ಮುಂದೇನು ಕುರಿತು ನಡೆದ ಸಂವಾದ ಗೋಷ್ಠಿಯಲ್ಲಿ ಡಾ. ವಿ.ಜಿ. ಪೂಜಾರ, ಡಾ. ಸ್ವಾಮಿರಾವ ಕುಲಕರ್ಣಿ, ಡಾ. ಶ್ರೀಶೈಲ ನಾಗರಾಳ, ಡಾ. ನಾಗಾಬಾಯಿ ಬುಳ್ಳಾ, ಡಾ. ಬಸವಲಿಂಗ ಸೊಪ್ಪಿನ ಮಠ, ಡಾ. ಡಿ.ಬಿ. ನಾಯಕ್, ಡಾ. ಸೂರ್ಯಕಾಂತ ಸುಜ್ಯಾತಾ, ಡಾ. ಚಂದ್ರಕಲಾ ಬಿದರಿ, ಡಾ. ಅಮೃತಾ ಕಟಕೆ ಸಂವಾದದಲ್ಲಿ ಭಾಗವಹಿಸಿದ್ದರು ಡಾ. ಶಿವಗಂಗಾ ರುಮ್ಮಾ ಕಾರ್ಯಕ್ರಮ ನಿರೂಪಿಸಿದರು.

***ಕೃಪೆ : ವಿಜಯ ಕರ್ನಾಟಕ***

# ಭಾಷೆ ಮೇಲೆ ಪ್ರಭುತ್ವ ಅಡಗಿರಲಿ

**ಭಾ**ಷೆಯ ಮೇಲೆ ಪ್ರಭುತ್ವ ಸಾಧಿಸುವ ಮೂಲಕ ಲೇಖಕ ಗುರುತಿಸಿಕೊಳ್ಳಬೇಕೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅಭಿಪ್ರಾಯಪಟ್ಟರು.

ಕಲಬುರ್ಗಿ ನಗರದ ನೂತನ ವಿದ್ಯಾಲಯ ಡಿಗ್ರಿ ಕಾಲೇಜಿನ ಆವರಣದಲ್ಲಿ ಶಿರಪುರ ಪ್ರಕಾಶನ ಸಂಸ್ಥೆಯ ಪುಸ್ತಕ ಮೂರು, ರೂಪಾಯಿ ನೂರು ಪುಸ್ತಕ ಪ್ರಕಾಶನ ಯೋಜನೆಯ ಐದು ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿ, ಹಾಸ್ಯ ವಿಡಂಬನಾತ್ಮಕ ಕವಿತೆಗಳು ಲೇಖನಗಳು ಹೆಚ್ಚು ಪ್ರಸ್ತುತವಾದವು ಗಳಾಗಿದ್ದು, ಮಧ್ಯಮ ವರ್ಗದ ಅಂದರೆ ಕಠಿಣವಾದ ವಿಮರ್ಶೆ, ತಾಂತ್ರಿಕ ವಿಷಯಗಳುಳ್ಳ ಪ್ರಕಟಣೆಗಳನ್ನು ತೆಗೆದುಕೊಳ್ಳದೇ ಉತ್ತಮ ಸಾಹಿತ್ಯ ಅಭಿರುಚಿಯ ಪುಸ್ತಕಗಳು ಪ್ರಕಟಿಸುತ್ತಿರುವ ಶಿರಪುರ ಪ್ರಕಾಶನ ಕಾರ್ಯ ಶ್ಲಾಘನೀಯ ಎಂದರು.

ಸಾಹಿತ್ಯ, ಕಲೆ, ಸಾಂಸ್ಕೃತಿಕ ವಾತಾವರಣದ ಸಂಕಿರಣವನ್ನು ಕಾರ್ಯಕ್ರಮ ಸೃಷ್ಟಿಸಿರುವುದು ಮನಸ್ಸಿಗೆ ಪ್ರಸನ್ನತೆ ಒದಗಿಸಿದೆ. ಸಾಹಿತ್ಯದಂತಹ ವಿಶಿಷ್ಟ ಕಾರ್ಯಕ್ರಮಗಳು ಎಲ್ಲಡೆ ಮುಟ್ಟುವುದಿಲ್ಲ. ಪತ್ರಿಕೆಗಳಲ್ಲಿ ಪ್ರಾದೇಶಿಕತೆಯಂತೆ ಸಾಹಿತ್ಯ, ಸಾಹಿತಿಗಳಲ್ಲೂ ಪ್ರಾದೇಶಿಕತೆ ಕಲೆ ಹಾಕಿದೆಯೇ ಎಂಬ ಸಂಶಯ ವ್ಯಕ್ತಪಡಿಸಿದರು.

ಪಂಪ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಪ್ರೊ. ಹೇಮಂತ ಕೊಲ್ಲಾಪುರ ರಚಿಸಿದ ಆರು ಪ್ರಹಸನಗಳು, ಮಹಾದೇವಯ್ಯ ಕರದಳ್ಳಿ ರಚನೆಯ ನಿತ್ಯ ಜೀವನದಲ್ಲಿ ಸ್ವದೇಶಿ, ರಾಜೇಂದ್ರ ಬಡಿಗೇರ ಚಿಂತನ ಸಿರಿ ಪುಸ್ತಕಗಳನ್ನು ಅಕಾಡೆಮಿ ಅಧ್ಯಕ್ಷರು ಬಿಡುಗಡೆ ಮಾಡಿದರು. ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ದಯಾಘನ ಧಾರವಾಡಕರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ. ಮುರಳೀಧರರಾವ ಅಧ್ಯಕ್ಷತೆ ವಹಿಸಿದ್ದರು. ವ್ಹಿ.ಜಿ. ಮಹಿಳಾ ಮಹಾವಿದ್ಯಾಲಯ ಕನ್ನಡ ಪ್ರಾಧ್ಯಾಪಕ ಡಾ. ಈಶ್ವರಯ್ಯ ಮಠ ಅವರು ಪುಸ್ತಕಗಳ ಪರಿಚಯ ಮಾಡಿದರು.

ಪ್ರಕಾಶಕ ಡಾ. ಸ್ವಾಮಿರಾವ ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾರಾಯಣ ಕುಲಕರ್ಣಿ ಸ್ವಾಗತಿಸಿದರು. ಕಾವ್ಯಶ್ರೀ ನಾಗಭೂಷಣ ನಿರೂಪಿಸಿದರು. ಕನ್ನಡ ಉಪನ್ಯಾಸಕಿ ಶಾಂತಾ ಬಿ. ವಂದಿಸಿದರು. ಐ.ಎಸ್. ನವಲಿ, ಮೋಹನ ಸೀತನೂರ, ಕೆ.ಪಿ.ಗಿರಿಧರ, ಪ್ರಲ್ಹಾದ ಕೆ ಮುಂತಾದ ಉಪನ್ಯಾಸಕರು, ಸ್ಥಳೀಯ ಸಾಹಿತಿಗಳು ಉಪಸ್ಥಿತರಿದ್ದರು.

ಕೃಪೆ : ***ಸಂಯುಕ್ತ ಕರ್ನಾಟಕ***

# ಉದಾರೀಕರಣದಿಂದ ಹತ್ತಿರವಾಗುತ್ತಿರುವ ಪ್ರಪಂಚ

**ಜಾ**ಗತೀಕರಣ, ಖಾಸಗೀಕರಣ ಮತ್ತು ಮಾರುಕಟ್ಟೆ ಉದಾರೀಕರಣಗಳಿಂದಾಗಿ ಪ್ರಪಂಚ ಇಂದು ಬಹಳ ಹತ್ತಿರ ವಾಗುತ್ತಿದೆ. ಆದರೆ ಮನುಷ್ಯನ ಬದುಕು ಮಾತ್ರ ನರಕವಾಗುತ್ತಿದೆ ಎಂದು ಹಿರಿಯ ಸಾಹಿತಿ ಪ್ರೊ. ಶಿವರಾಮಯ್ಯ ವಿಷಾದಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಯುರೇಕಾ ಅಕಾಡೆಮಿಯ ಆಶ್ರಯದಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ 'ಹೊಸ ಶತಮಾನಕ್ಕೆ ಕನ್ನಡ ಪರಿಭಾಷೆಯ ಸಾಧ್ಯತೆಗಳು' ವಿಷಯ ಕುರಿತ ವಿಚಾರ ಸಂಕಿರಣ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವೈಜ್ಞಾನಿಕವಾಗಿ ಮುಂದುವರೆದ ಕಾರಣ ನಾವು ಚಂದ್ರನ ಮೇಲೆ ಸದ್ಯದಲ್ಲೇ ಪಾದಾರ್ಪಣೆ ಮಾಡಲಿದ್ದೇವೆ. ಸಾಗರದ ಆಳದಲ್ಲಿ ಈಜಲಿದ್ದೇವೆ, ಇದೆಲ್ಲದರ ನಡುವೆ ನಾವೆ ಕಟ್ಟಿಕೊಂಡ ಸ್ವರ್ಗದಲ್ಲಿ ನರಳುತ್ತಿದ್ದೇವೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವು ನಮ್ಮ ಪರಂಪರೆಯನ್ನು ಸಾಹಿತ್ಯ ಮತ್ತು ಕಲೆಯನ್ನು ಮರು ಪರಿಶೀಲನೆ ಮಾಡಿ ವರ್ತಮಾನದ ಹೆಜ್ಜೆಯನ್ನು ನಿರ್ಧರಿಸಿ ಕೊಳ್ಳಬೇಕು. ವಿಶ್ವದ ಎಲ್ಲಾ ಕಲಾ ಪರಂಪರೆಗಳಲ್ಲಿ ಈ ಕೆಲಸ ನಡೆಯುತ್ತಿದೆ ಎಂದರು.

ಈ ಸಂದರ್ಭದಲ್ಲಿ ನವೋದಯ ಪರಿಭಾಷೆ ಕುರಿತು ಕೆ. ಓಂಕಾರಪ್ಪ, ದಲಿತ ಬಂಡಾಯ ಸಾಹಿತ್ಯದ ಪರಿಭಾಷೆ ಕುರಿತು ಡಾ. ರಂಗರಾಜ ವನದುರ್ಗ ಮತ್ತು ನವ್ಯ ಸಾಹಿತ್ಯ ಪರಿಭಾಷೆ ಕುರಿತು ಡಾ. ಕೆ. ಕೇಶವಶರ್ಮ ಉಪನ್ಯಾಸ ನೀಡಿದರು.

ಆನಂತರ ನಡೆದ ಸಂವಾದದಲ್ಲಿ ಬಿ.ಎನ್. ಜ್ವಾಲನಪ್ಪ, ರಮೇಶ್ ಗೊಂಗಾಳೆ, ಬಿ. ತಿಪ್ಪೇರುದ್ರಪ್ಪ, ಮಮತಾ ಡಿ., ಬಿ.ಆರ್. ಜಗದೀಶ್, ಡಾ. ಎಚ್.ಎಸ್. ಸರಸ್ವತಿ, ಡಾ. ಮಂಡಲಗಿರಿ ಪ್ರಸನ್ನ, ಅರವಿಂದ ದೀಕ್ಷಿತ್, ಡಾ. ಎಸ್.ಆರ್. ವೈದ್ಯ ಭಾಗವಹಿಸಿದ್ದರು.

ಜಿಲ್ಲಾ ವಚನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ. ಚಂದ್ರಯ್ಯನಾಯ್ಡು ಸಮಾರೋಪ ಭಾಷಣ ಮಾಡಿದರು. ಯುರೇಕಾ ಅಕಾಡಮಿಯ ಪ್ರಾಂಶುಪಾಲ ದೀಪಕ್ ದೊಡ್ಡಯ್ಯ ಉಪಸ್ಥಿತರಿದ್ದರು.

ಕೃಪೆ : ***ಸಂಯುಕ್ತ ಕರ್ನಾಟಕ***

# ಇ–ಮಾಧ್ಯಮ ಬಳಕೆಗೆ ಮುಂದಾದ ಕರ್ನಾಟಕ ಸಾಹಿತ್ಯ ಅಕಾಡೆಮಿ

**ವೆ**ಬ್‌ಸೈಟ್, ಬ್ಲಾಗ್ ಕ್ರಾಂತಿಯಲ್ಲಿ ಪುಸ್ತಕ ಸಂಸ್ಕೃತಿ 'ಮಾಯ'ವಾಗುವ ಲಕ್ಷಣಗಳು ಗೋಚರಿಸುತ್ತಿರುವಾಗಲೇ ಕರ್ನಾಟಕ ಸಾಹಿತ್ಯ ಅಕಾಡೆಮಿ 'ಇ–ಮಾಧ್ಯಮ'ವನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಮುಂದಡಿಯಿಡಲಿದೆ.

ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಪ್ರೊ॥ ಎಂ. ಎಚ್. ಕೃಷ್ಣಯ್ಯ ಇಂತಹದೊಂದು ಹೊಸ ಪರಂಪರೆಗೆ ನಾಂದಿ ಹಾಡಲಿದ್ದಾರೆ. ಕನ್ನಡ, ಕನ್ನಡ ಸಾಹಿತ್ಯವನ್ನು ನಾಡಿನ ಪರಿಧಿಗೆ ಮಾತ್ರ ಸೀಮಿತಗೊಳಿಸದೇ ಅದನ್ನು ವಿಶ್ವವ್ಯಾಪಿಯಾಗಿಸುವುದು ಇದರ ಹಿಂದಿನ ಆಶಯ.

'ಉದಯವಾಣಿ' ಜತೆ ಕೃಷ್ಣಯ್ಯ ತಮ್ಮ ಕನಸು ಬಿಚ್ಚಿಟ್ಟಿದ್ದು ಹೀಗೆ: 'ಕರ್ನಾಟಕ ಸಾಹಿತ್ಯ ಅಕಾಡೆಮಿ ಡಾಟ್ ಆರ್ಗ್' ವೆಬ್‌ಸೈಟ್‌ನಲ್ಲಿ ಕನ್ನಡ ಸಾಹಿತ್ಯ ವಿಶ್ವಕ್ಕೆ ತೆರೆದುಕೊಳ್ಳಲಿರುವುದು ಈ ಯೋಜನೆ.

ಕನ್ನಡದ ಸೃಜನಶೀಲ ಕವಿಗಳ ಕಾವ್ಯಸ್ವಾದ ಹಾಗೂ ಅವರ ವಾಚನ ಶೈಲಿಯನ್ನು ಪರಿಚಯಿಸುವ ಮಾಲಿಕೆಯಿದು. ಕವಿಗಳ ಹೆಸರನ್ನು ವೆಬ್‌ನಲ್ಲಿ ಕ್ಲಿಕ್ ಮಾಡಿದಾಕ್ಷಣ ಪರಿಚಯ, ಒಟ್ಟಾರೆ ಕೊಡುಗೆಯ ಮಾಹಿತಿ ತೆರೆದುಕೊಳ್ಳುತ್ತದೆ. ಆನಂತರ ಕವಿತಾ ವಾಚನ ದೃಶ್ಯರೂಪ (ವಿಡಿಯೋ) ಬಿತ್ತರಗೊಳ್ಳುತ್ತದೆ. ತದನಂತರ ಕವಿತೆಯ ಸಾಂದರ್ಭಿಕ ಅರ್ಥವಿವರಣೆಗೂ ಅವಕಾಶ ಕಲ್ಪಿಸಲಾಗಿದೆ.

ಮೊದಲ ಹಂತದಲ್ಲಿ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ, ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ॥ ಯು.ಆರ್ ಅನಂತಮೂರ್ತಿ, ಪದ್ಮಶ್ರೀ ಕೆ. ಎಸ್. ನಿಸಾರ್‌ಅಹಮದ್, ಪದ್ಮಶ್ರೀ ಚಂದ್ರಶೇಖರ ಕಂಬಾರ, ನಾಡೋಜ ಚೆನ್ನವೀರಕಣವಿ, ನಾಡೋಜ ಸಿದ್ಧಲಿಂಗಯ್ಯ ಅವರ ಕಾವ್ಯಸ್ವಾದವನ್ನು ವೆಬ್‌ಸೈಟ್‌ಗೆ ಅಳವಡಿಸಲಾಗುತ್ತದೆ. ಮಾರ್ಚ್‌ನೊಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಕ್ರಮೇಣವಾಗಿ ಮುಂದಿನ ದಿನಗಳಲ್ಲಿ ಉಳಿದ ಕವಿಗಳು ಈ ಸಾಲಿನಲ್ಲಿ ಸೇರಲಿದ್ದಾರೆ.

ಕವಿಗಳ ಮಾಹಿತಿ, ಕವಿ ದರ್ಶನ ಹಾಗೂ ಕವಿತೆಗಳ ಅರ್ಥಸಾಧ್ಯತೆಯ ವಿಶ್ಲೇಷಣೆ ಮೂರು ಒಂದೇ ಕಡೆ ಸಿಗುವಂತೆ ಮಾಡುವ ಮಹತ್ವದ ಯೋಜನೆ ಇದಾಗಿದೆ.

'ಮಕ್ಕಳಿಗೆ ಕಲಿ–ನಲಿ' ಆಧುನಿಕ ಶಿಕ್ಷಣ ವ್ಯವಸ್ಥೆಯಿಂದಾಗಿ ಇಂದಿನ ಮಕ್ಕಳು ಕನ್ನಡದಿಂದ ದೂರವಾಗುತ್ತಿರುವುದು ಆತಂಕದ ಸಂಗತಿ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಲೇ ಇದ್ದಾರೆ. ಇಂಗ್ಲಿಷ್‌ನ ಪೋಗೋ, ಕಾರ್ಟೂನ್ ನೆಟ್‌ವರ್ಕ್‌ಗಳ ಕಡೆಗೆ ಮಕ್ಕಳು ಆಕರ್ಷಿತರಾಗುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಮಕ್ಕಳನ್ನು ಆಕರ್ಷಿಸಲು ಅಭಿರುಚಿ ಬೆಳೆಸಲು ಕೃಷ್ಣಯ್ಯವರು ಕನಸೊಂದ ಕಟ್ಟಿಕೊಂಡಿದ್ದಾರೆ. ಕನ್ನಡದ ಹೆಸರಾಂತ ಶಿಶುಗೀತೆಗಳಾದ ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ, ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ? ನಾಗರ ಹಾವೆ ಹಾವೊಳು ಹೂವೆ ಎಂಬಿತ್ಯಾದಿ ಗೀತೆಗಳನ್ನು ಹೆಣ್ಣುಮಕ್ಕಳಿಂದ ಹಾಡಿಸಿ, ಅನಿಮೇಷನ್ ಚಿತ್ರ ತಯಾರಿಸುವುದು. ಅದನ್ನು ವೆಬ್‌ಸೈಟ್‌ಗೆ ಅಳವಡಿಸುವುದು. ಮಕ್ಕಳ ಹಾಡಿನ ಲಯಗಾರಿಕೆ, ಕುಣಿತ, ಗೇಯತೆಯನ್ನು ಮಕ್ಕಳಿಗೆ ಕೇಳಿಸುವುದು ಇದರ ಆಶಯ. ಆಧುನಿಕ ಒತ್ತಡದಲ್ಲಿರುವ ಅಪ್ಪಅಮ್ಮಂದಿರು ಹೀಗಾದರೂ ಮಕ್ಕಳಿಗೆ ಕನ್ನಡ ಕಲಿಸಲಿ ಎಂದು ಕೃಷ್ಣಯ್ಯ ಅಭಿಪ್ರಾಯಪಡುತ್ತಾರೆ. ಪಂಜೆ ಮಂಗೇಶರಾಯರು, ಜಿ.ಪಿ. ರಾಜರತ್ನಂ, ಎಲ್. ಗುಂಡಪ್ಪರಂತಹ ಕವಿಗಳನ್ನು ನೆನಪಿಸಲು ಈ ಯೋಜನೆ ರೂಪುಗೊಂಡಿದೆ.

ಹ್ಯಾಂಡ್ ಬುಕ್: ಕನ್ನಡ ಸಾಹಿತಿಗಳ ಪರಿಚಯವುಳ್ಳ 'ಹ್ಯಾಂಡ್ ಬುಕ್ ಆಫ್ ಕನ್ನಡ ಲಿಟರೇಚರ್'ನ್ನು ರೂಪಿಸಿ ವೆಬ್‌ಗೆ ಅಳವಡಿಸಲು ಯೋಜನೆ ಸಿದ್ಧಗೊಂಡಿದೆ. ಇಂಗ್ಲಿಷ್‌ನಲ್ಲಿರುವ ಈ ಮಾಹಿತಿ ಕನ್ನಡನಾಡಿನ ಸಾಹಿತಿಗಳ ಒಟ್ಟೂ ಸಾಧನೆಯನ್ನು ಅನ್ಯಭಾಷಿಗರಿಗೆ ಪರಿಚಯಿಸುವ ಸಾರ್ಥಕ ಕೆಲಸ ಮಾಡಲಿದೆ ಎಂಬ ವಿಶ್ವಾಸ ಕೃಷ್ಣಯ್ಯನವರದು.

ಅನಿಕೇತನ : ಸಾಹಿತ್ಯ ಅಕಾಡೆಮಿ 'ಅನಿಕೇತನ'ವೆಂಬ ತ್ರೈಮಾಸಿಕವನ್ನು ಹೊರತರುತ್ತಿದೆ. ಆದರೆ ನಿಯತಕಾಲಿಕೆಯಾಗಿಲ್ಲ. ಸಕಾಲಕ್ಕೆ ಓದುಗರನ್ನು ತಲುಪುವುದು ಕಷ್ಟ. ಈ ನಿಟ್ಟಿನಲ್ಲಿ ಅನಿಕೇತನವನ್ನು ವೆಬ್ ಮಾಸಿಕವಾಗಿ ರೂಪಿಸಲು ಸಿದ್ಧತೆ ನಡೆದಿದೆ. ಇಂಗ್ಲಿಷ್ ಭಾಷೆಯ ಅನಿಕೇತನ ಕನ್ನಡ ಸಾಹಿತ್ಯವನ್ನು ಹೊರಜಗತ್ತಿಗೆ ಪರಿಚಯಿಸಿದರೆ, ಕನ್ನಡ ಅನಿಕೇತನ ಇತರೆಲ್ಲಾ ಭಾಷೆಗಳ ಆಕರಗಳನ್ನು ಕನ್ನಡದಲ್ಲಿ ಕೊಡುತ್ತಿದೆ.

*ಸೌಜನ್ಯ :* ***ಉದಯವಾಣಿ***

**'ವಾರ್ತಾಪತ್ರ' ದ್ವೈಮಾಸಿಕ ಪತ್ರಿಕೆ**

*ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸುತ್ತಿರುವ 'ವಾರ್ತಾಪತ್ರ' ದ್ವೈಮಾಸಿಕ ಪತ್ರಿಕೆಗೆ ಸಂಪಾದಕರನ್ನಾಗಿ ಶ್ರೀ ಆರ್. ವಸಂತ್ ಕುಮಾರ್ ಹಾಗೂ ಶ್ರೀ ಎಂ.ಡಿ. ತ್ರಿಲೋಚನ ಒಡೆಯರ್ ಅವರುಗಳನ್ನು ಹೊಸ ಆಯ್ಕೆ ಸಮಿತಿ ನೇಮಿಸಿದೆ.*

# ಕನ್ನಡ ಕೇವಲ ಭಾಷೆಯಲ್ಲ, ಸಂಸ್ಕೃತಿ

**ಕ**ನ್ನಡ ಕೇವಲ ಭಾಷೆಯಲ್ಲ, ಅದು ಸಂಸ್ಕೃತಿ. ಭಾಷೆ ಕಣ್ಮರೆಯಾದರೆ ಸಂಸ್ಕೃತಿಯೂ ನಾಶವಾಗುತ್ತದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್.ಕೃಷ್ಣಯ್ಯ ಅಭಿಪ್ರಾಯಪಟ್ಟರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಜಿಲ್ಲಾ ಪದವಿ ಪೂರ್ವ ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಆಶ್ರಯದಲ್ಲಿ ಚಾಮರಾಜನಗರ ಜಿಲ್ಲಾ ಆಡಳಿತ ಭವನದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಹಳೆಗನ್ನಡ ಕಾವ್ಯದ ಓದು ಮತ್ತು ಅರ್ಥೈಸುವ ಭಿನ್ನ ಆಯಾಮಗಳು ಕುರಿತು ವಿಚಾರ ಸಂಕಿರಣ ಹಾಗೂ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹುಟ್ಟಿದ ಮಗುವಿಗೆ ಭಾಷೆ ಕಲಿಕೆಯಿಂದ ಬರುತ್ತದೆ. ಭಾಷೆ ಬಳಸಿದರೆ ಕನ್ನಡ ಬದುಕುತ್ತದೆ. ಇಲ್ಲದಿದ್ದರೆ ಸಾಯುತ್ತದೆ. ಸದ್ಯಕ್ಕೆ ನಮ್ಮ ಭಾಷೆಯ ಸ್ಥಿತಿ ಇದೇ ರೀತಿಯಲ್ಲಿದೆ ಎಂದರು.

ಪ್ರತಿಯೊಂದು ಭಾಷೆಯ ಲಯ ನಾಡಿಮಿಡಿತ ಇದ್ದಂತೆ. ಲಯ ಇರುವುದರಿಂದ ಹಳಗನ್ನಡವನ್ನು ಸುಲಭವಾಗಿ ಓದಲು ಸಾಧ್ಯವಾಗಿದೆ ಎಂದು ನುಡಿದರು.

ಹಳಗನ್ನಡ ಹಾಗೂ ಪ್ರಾಚೀನ ಸಾಹಿತ್ಯದ ಬಗ್ಗೆ ಇಂದಿನ ಅಧ್ಯಾಪಕರುಗಳಿಗೆ ತಿರಸ್ಕಾರ ಹಾಗೂ ಅವಜ್ಞೆ ಇದೆ. ಸಮಕಾಲೀನ ಸಾಹಿತ್ಯ ಸಾಕು? ಹಿಂದಿನ ಸಾಹಿತ್ಯದಿಂದ ನಮಗೆ ಆಗಬೇಕಾದ್ದು ಏನು ಎಂಬ ಭಾವನೆ ಇದೆ.

ಹಾಗೆಯೇ ನಾವಾಡುವ ಕನ್ನಡಕ್ಕೂ ಪಂಪ, ರನ್ನರ ಕನ್ನಡಕ್ಕೂ ಎಲ್ಲೆಲ್ಲಿಯ ಸಂಬಂಧ ಎಂದು ಗೇಲಿ ಮಾಡಲಾಗುತ್ತದೆ. ಪಂಪ, ರನ್ನರ ಕನ್ನಡ ಬಿಡಿಸುವುದೂ ಕಷ್ಟ, ಓದುವುದು ಇನ್ನೂ ಕಷ್ಟ ಎಂಬ ಮನಸ್ಥಿತಿ ಕೆಲವರದ್ದಾಗಿದೆ.

ನನ್ನ ಪ್ರಕಾರ ಸಾಹಿತ್ಯ ಎನ್ನುವುದು ಸಾರ್ವಕಾಲೀನವಾದುದ್ದಾಗಿದೆ. ಆವತ್ತು, ಇವತ್ತು, ಯಾವತ್ತಿಗೂ ಅದರ ಅಗತ್ಯವಿದೆ. ಅದು ನಾಶವಾದರೆ ಪಂಪ, ರನ್ನ, ಬಸವಣ್ಣ, ಸರ್ವಜ್ಞರೂ ನಾಶವಾದಂತೆ ಎಂದು ಕೃಷ್ಣಯ್ಯನವರು ಅಭಿಪ್ರಾಯಪಟ್ಟರು.

ಹಿಂದುಳಿದ ಗಡಿಭಾಗದಲ್ಲಿ ಇಂಥ ವಿಚಾರ ಸಂಕಿರಣ, ಕಮ್ಮಟ ಹಾಗೂ ಉಪನ್ಯಾಸ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯಲಿ. ಅದೆಲ್ಲದ್ದಕ್ಕೂ ಸಾಹಿತ್ಯ ಅಕಾಡೆಮಿಯ ಸಹಕಾರ ಇರುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯ ಸ್ಥಾನಿಕ ಅಧಿಕಾರಿ ಜನ್ನಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕನ್ನಡದ ನಂತರ ಇತರ ಭಾಷೆಗಳನ್ನು ಓದುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಅಧ್ಯಾಪಕರು ಹೆಚ್ಚು ಓದಿದಷ್ಟು ಅದರ ಅನುಕೂಲ ವಿದ್ಯಾರ್ಥಿಗಳಿಗೆ ಆಗುತ್ತದೆ ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ರೋಹಿಣಿ ಅತಿಥಿಯಾಗಿ ಮಾತನಾಡಿ, ಹಿಂದೆಯೆಲ್ಲ ಆಂಗ್ಲ ಭಾಷೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದರು. ಈಗ ಮಾತೃಭಾಷೆಯಾದ ಕನ್ನಡದಲ್ಲೂ ನಪಾಸಾಗುತ್ತಿರುವುದನ್ನು ಕಾಣುತ್ತಿದ್ದೇವೆ. ನಾವು ಎಲ್ಲಿ ಎಡವುತ್ತಿದ್ದೇವೆ ಎಂಬುದನ್ನು ಅಧ್ಯಾಪಕರು ಗಮನಿಸಬೇಕಾಗಿದೆ ಎಂದರು.

ಅತಿಥಿ ಉಪನ್ಯಾಸಕರ ನೇಮಕ ಸಂದರ್ಭದಲ್ಲಿ ಇತ್ತೀಚೆಗೆ ಒಬ್ಬರು ತಮ್ಮ ಅರ್ಜಿಯಲ್ಲಿ 'ಹುದ್ದೆ' ಎನ್ನುವುದನ್ನೇ ಸರಿಯಾಗಿ ಬರೆದಿರಲಿಲ್ಲ. ಇಷ್ಟು ವರ್ಷ ಓದಿ ಅವರು ಏನು ಕಲಿತರು ಎಂಬ ಪ್ರಶ್ನೆ ಇವತ್ತಿಗೂ ನನ್ನನ್ನು ಕಾಡುತ್ತಿದೆ ಎಂದು ಹೇಳಿದರು.

ಪ್ರೊ. ಕಿ.ರಂ. ನಾಗರಾಜ, ಪ್ರೊ. ಎಸ್.ನಂಜುಂಡಯ್ಯ, ಸಾಹಿತಿ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಪದವಿಪೂರ್ವ ಕಾಲೇಜು ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಬಿ.ಮಹೇಶ್‌ಹರವೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಸಿ.ಲಿಂಗಯ್ಯ ಅವರು ನಿರೂಪಿಸಿದರು.

ಕೃಪೆ : **ಆಂದೋಲನ**


**ಕರ್ನಾಟಕ ಸಾಹಿತ್ಯ ಅಕಾಡೆಮಿ ಜಾಲತಾಣ (Website)**

**"karnatakasahithyaacademy.org"**

**ಕನ್ನಡ ಸಾಹಿತ್ಯದಲ್ಲಿ ಪ್ರತಿಷ್ಠಿತ ಪ್ರಶಸ್ತಿ ಪಡೆದ ಸಾಹಿತಿಗಳ ವಿವರ,**
**ಲೇಖಕರುಗಳ ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿಗಳು ಇಲ್ಲಿ ಲಭ್ಯ.**

**ಈ ತಾಣಕ್ಕೆ ಭೇಟಿ ಕೊಡಿ**

# ಕರ್ನಾಟಕ ಸಾಹಿತ್ಯ ಅಕಾಡೆಮಿಯ ಇತ್ತೀಚಿನ ಪ್ರಕಟಣೆಗಳು










